
ಕಲ್ಯಾಣ ಕಿರಣ

ಅಕ್ಟೋಬರ್ - 2004 ಬೆಲೆ ರೂ : 5-00



ಗಾಂಧಿ ಜಯಂತಿ ಶುಭಾಶಯಗಳು



ಬಸವ ಕಲ್ಯಾಣದ 108 ಅಡಿ ಮೂರ್ತಿಯ ನಿರ್ಮಾಣಕ್ಕೆ ನಾಂದಿ ಪೂಜೆ ದಿ. 1-9-2004



ಧರ್ಮಗುರು ಬಸವಣ್ಣ

ಓಂ ಶ್ರೀ ಗುರುಬಸವಲಿಂಗಾಯ ನಮಃ

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಹದಿನೆಂಟನೆಯ

ಶರಣ ಮೇಳ

ಗಣ ಧ್ವಜ

2005ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988 ಜನವರಿ 14, 15 ರಿಂದ 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನೇಳನೆಯ ಶರಣ ಮೇಳವು 2005ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ , ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ' ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ಮುಸಲ್ಮಾನ್ ಧರ್ಮಿಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ - 587115, ತಾ-ಹುನಗುಂದ,
ಜಿ-ಬಾಗಲಕೋಟೆ. ದೂ : 08351-268038/268007

ಬೆಂಗಳೂರು ವಿಳಾಸ :
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು- 10
ದೂರವಾಣಿ: 080-23325335/23322790

ಕಲ್ಯಾಣ ಕಿರಣ

ಸಂಪುಟ 35 ಬಸವ ಶಕೆ 871 ಆಜೀವ ಸದಸ್ಯತ್ವ 500 ರೂ.
ಸಂಚಿಕೆ 8 ಅಕ್ಟೋಬರ್ 2004 ವಾರ್ಷಿಕ ಚಂದಾ 50/- ರೂ.

ಕಿರಣಗನ್ನಡಿ

WWW. Vishwakalyana mission .org

* ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ನೈತಿಕ, ಮಾನವೀಯ ಮೌಲ್ಯಗಳನ್ನು ಬಿತ್ತರಿಸುತ್ತಿರುವ ಕಲ್ಯಾಣ ಕಿರಣ ಮಾಸಪತ್ರಿಕೆಗೆ ಚಂದಾದಾರರಾಗಿರಿ ಮತ್ತು ಇತರರನ್ನು ಚಂದಾದಾರರಾಗುವಂತೆ ಪ್ರೇರೇಪಿಸಿರಿ. ವಾರ್ಷಿಕ ಸದಸ್ಯತ್ವ- ರೂ. 50, ಆಜೀವ ಸದಸ್ಯತ್ವ- ರೂ. 500

45ನೇ ಹುಟ್ಟು ಹಬ್ಬದ ಶುಭಾಶಯಗಳು

ದಿ. 23-10-2004 ರಂದು ಬಸವ ಧರ್ಮ ವಿಜಯೋತ್ಸವ (ವಿಜಯ ದಶಮಿ) ದಂದು 44 ವರ್ಷಗಳನ್ನು ಪೂರೈಸಿ 45ನೇ ವರ್ಷಕ್ಕೆ ಪಾದಾರ್ಪಣಾ ಮಾಡಲಿರುವ ಬಸವ ಕಲ್ಯಾಣದ ಶೂನ್ಯ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರಿಗೆ ಹುಟ್ಟು ಹಬ್ಬದ ಶುಭಾಶಯಗಳು.

- ಕಲ್ಯಾಣ ಕಿರಣ ಸಿಬ್ಬಂದಿ ವರ್ಗ

KALYANA KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 3325335/3322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಬಸವ ಬೀಡಿನಿಂದ ಅಮೆರಿಕಾ ನಾಡಿಗೆ

ಪ್ರವಾಸ ಕಥನ - ಭಾಗ 7 - ಮಾತಾಜಿ

(ಕಲ್ಯಾಣ ಕಿರಣ ಜುಲೈ 2004 ಸಂಚಿಕೆಯಿಂದ ಮುಂದುವರಿದಿದೆ)

ಅಮೆರಿಕಾದ ನಗರಗಳ ಅನೇಕ ಜನರ ಮನೆಯ ಮುಂದೆ ಕುಂಬಳಕಾಯಿಗಳು ಕಾಣಿಸಿಕೊಳ್ಳ ತೊಡಗಿದವು. ಚಿತ್ರ-ವಿಚಿತ್ರ ಆಕಾರದ ಪ್ರೇತಗಳ ಚಿತ್ರಗಳೂ ಮನೆಯ ಮುಂದಿನ ಗಿಡಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿದವು. ನೈಸರ್ಗಿಕ ಕುಂಬಳಕಾಯಿಗಳ ಜೊತೆಗೆ ಪ್ಲಾಸ್ಟಿಕ್ ಕುಂಬಳಕಾಯಿಗಳೂ ನೇತಾಡ ತೊಡಗಿದವು. ನನಗೆ ಆಶ್ಚರ್ಯವೆನಿಸಿತು. ಯೋಗೀಶ್ವರಿಯವರನ್ನು ವಿಚಾರಿಸಿದಾಗ ಇಲ್ಲಿ ಇದಕ್ಕೆ ಹಾಲೋವೆನ್ (Hallowen) ಹಬ್ಬ ಎನ್ನುತ್ತಾರೆ ಎಂದರು. ಇದರ ವಿವರಗಳೇನು ಎಂದು ಅಂತರ್ಜಾಲದಲ್ಲಿ ನೋಡಿಕೊಂಡು ಬಂದರು. ಇದು ಕ್ರೈಸ್ತ ಧರ್ಮವು ಮಾನಿಸುವ ಹಬ್ಬವಲ್ಲ. ಆದಿ ವಾಸಿ ಜನಗಳಲ್ಲಿ ರೂಢಿಯಲ್ಲಿದ್ದ ಒಂದು ಜಾನಪದ ಹಬ್ಬ. ಒಂದು ಅರ್ಥದಲ್ಲಿ ಅದು ಸುಗ್ಗಿ ಹಬ್ಬ. ಕುಂಬಳಕಾಯಿ ಇತ್ಯಾದಿ ಸಮೃದ್ಧವಾಗಿ ಬೆಳೆದ ಸಮಯ. ಇನ್ನೊಂದು ಅರ್ಥದಲ್ಲಿ ಬೇಸಿಗೆ ಮುಗಿದು ಇನ್ನು ಚಳಿಗಾಲ ಶುರುವಾಗುತ್ತ ದವಸ ಧಾನ್ಯಗಳನ್ನು ಒಳಗಿಟ್ಟು ಹೊಲಗಳನ್ನೆಲ್ಲ ಬರಿದು ಮಾಡಿ ವ್ಯವಸಾಯಕ್ಕೆ ವಿದಾಯ ಹೇಳುವ ಹಬ್ಬ. ಮತ್ತೊಂದು ಕಥೆಯ ಪ್ರಕಾರ ಸತ್ತು ಹೋಗಿರುವ ಪ್ರೇತಾತ್ಮಗಳು ಭೂಮಿಯನ್ನು ಸಂದರ್ಶಿಸುವ ಸಮಯವಂತೆ. ಅದಕ್ಕೆ ಅವುಗಳನ್ನು ಹೆದರಿಸಿ ಓಡಿಸಲು ಚಿತ್ರವಿಚಿತ್ರವಾಗಿ ವೇಷ ಧರಿಸಿ, ಕೆಟ್ಟ ಧ್ವನಿಯಲ್ಲಿ ಚೀರುತ್ತ ಹುಡುಗ-ಹುಡುಗಿಯರು ಗದ್ದಲ ಹಾಕುವರಂತೆ. ಹಲವಾರು ದಿವಸ ಮೊದಲೇ ಹುಡುಗರ ಚೇಷ್ಟೆ ಶುರುವಾದರೂ-ನಮ್ಮಲ್ಲಿಯ ಕಾಮನ ಹಬ್ಬದಂತೆ, ಆ ಹಬ್ಬದ ದಿನ ಆ ಚೇಷ್ಟೆ ಮಿತಿ ಮೀರುತ್ತದಂತೆ. ನಾನು ಆ ದಿವಸ ಮಿಚಿಗನ್ ರಾಜ್ಯದ ಡೆಟ್ರಾಯಿಟ್‌ದಲ್ಲಿದ್ದೆ.

ಕ್ರೈಸ್ತ ಧರ್ಮದ ಪ್ರಕಾರ ಇದರ ಆಚರಣೆ ನಿಷಿದ್ಧವಿದ್ದರೂ ಮೋಜಿಗಾಗಿ ಒಬ್ಬರನ್ನು ನೋಡಿ ಒಬ್ಬರು ಆಚರಿಸುತ್ತಾರೆ. ಅಮೆರಿಕಾದ ಮೂಲ ನಿವಾಸಿಗಳ ನಂಬಿಕೆಯೇ ಇದರ ಹಿನ್ನೆಲೆಯಲ್ಲಿದ್ದರೂ ಜಪಾನೀಯರು, ಥೈಲಾಂಡಿನವರೂ ಸಹ ಮನೆಯ ಮುಂದೆ ಕುಂಬಳಕಾಯಿಗಳನ್ನು ಇಟ್ಟಿದ್ದರು. ಯೋಗೀಶ್ವರಿಯವರು ತಮ್ಮ ಕಂಪೆನಿಯ ಕಾರ್ಯನಿಮಿತ್ತ ಮೂರು ದಿವಸಗಳ ಪ್ರವಾಸ ಕೈಗೊಂಡು ಬೇರೆ ರಾಜ್ಯಕ್ಕೆ ಹೋಗಿದ್ದರು. ಶಾಲೆಯ ಮಕ್ಕಳಲ್ಲಿ ವಿವಿಧ ವೇಷಭೂಷಣ ಧಾರಣೆ ಇತ್ಯಾದಿ ಇದ್ದು ಆಶಾರವರನ್ನು ಮತ್ತು ಅವರ ಮಗಳು ಶರಣ್ಯಳನ್ನು ಕಂಪೆನಿಯ ಮೇನೇಜರ್ ಮಿ॥ ಮೈಕ್ ತಮ್ಮ ಹೆಂಡತಿ ಮತ್ತು ಮಗನೊಡನೆ ಮಕ್ಕಳ ಶಾಲೆಗೆ ಕರೆದೊಯ್ದರು ಅವರ ಹೆಂಡತಿ ಶಾಲೆಯಲ್ಲಿ ಶಿಕ್ಷಕಿ.

ಐರೋಪ್ಯ ದೇಶಗಳವರು ಮುಖ್ಯವಾಗಿ ಇಂಗ್ಲೆಂಡ್‌ದವರು ಮತ್ತು ಅವರದೇ ವಂಶಜರಾದ ಅಮೆರಿಕನ್ನರು ಕೌಟುಂಬಿಕ ಪರಿಸ್ಥಿತಿಯನ್ನು ಹಾಳುಗೆಡವಿಕೊಂಡು ಈಗ ಪರಿತಪಿಸುತ್ತಿದ್ದಾರಂತೆ. ಹೀಗಾಗಿ ಈಗ ತಂದೆ ಮನೆಯ ಕಡೆಗೆ, ತಾಯಿ ತಂದೆ ಮಕ್ಕಳ ಕಡೆಗೆ ಹೆಚ್ಚಿನ ಗಮನ ಕೊಡುವರಂತೆ. ದಂತಿ ಕಾರ್ಪೊರೇಷನ್ (ಯೋಗೀಶ್ವರಿಯವರ ಸ್ವಂತ ಕಂಪೆನಿ)ದ ಅಮೆರಿಕನ್ ಮೇನೇಜರ್ ಮೈಕ್ ತನ್ನ 2 ವರ್ಷದ ಮಗುವಿನ ಮುಂದೆ ದಿನಾಲೂ ಒಳ್ಳೆಯ ಗ್ರಂಥಗಳನ್ನು, ಬೈಬಲನ್ನು ಓದುವರಂತೆ. ಅದಕ್ಕೇನು

ಅರ್ಥವಾಗುತ್ತಾ ಎಂದು ಕೇಳಿದರೆ, ಅರ್ಥವಾಗದಿದ್ದರೆ ಅದರ ಪ್ರಭಾವ ಬಿದ್ದೇ ಬೀಳುತ್ತೆ ಎನ್ನುವರಂತೆ. ಈ ವಿಚಾರಗಳೆಲ್ಲ ನಮಗೇನೂ ಹೊಸಾವಲ್ಲ. ತಾಯಿಯ ಗರ್ಭದಲ್ಲಿ ಮಗುವು ಇರುವಾಗಿನಿಂದಲೂ ಪರಿಸರದ ಪ್ರಭಾವ ಇರುತ್ತದೆ ಎಂದೇ ನಂಬಿರುವವರು ನಾವು.

ತಲೆಯ ಮೇಲೆ ಎರಡು ಕೊಂಬು, ಬಾಲ ಇತ್ಯಾದಿ ರೆಡಿಮೇಡ್ ವಸ್ತು ತಂದು, ಕೆನ್ನೆಯ ಮೇಲೊಂದು ಜೇಡರ ಹುಳುವಿನ ಚಿತ್ರ ಬಿಡಿಸಿ ಶರಣ್ಯಳನ್ನು ಆಶಾ ಕರೆದುಕೊಂಡು ಹೋಗಿ ಬಂದರು. ಅಲ್ಲೆಲ್ಲ ಮಕ್ಕಳು ಗುಂಪುಗುಂಪಾಗಿ ನಕ್ಕುನಲಿದು ಆಟವಾಡಿದರಂತೆ. ಸೃಜನಶೀಲವಾಗಿ ಬೇರೆಬೇರೆ ವಸ್ತುಗಳನ್ನು ಸಿದ್ಧಪಡಿಸಿದರು, ಬಾಲಭಾಷೆಯಲ್ಲೇ ಚಿತ್ರ ಬಿಡಿಸಿದರಂತೆ.

ನಾನು ಹೊರಡುವ ದಿವಸ ಹತ್ತಿರವಾಗುತ್ತಿತ್ತು. ಆಸ್ಟಿನ್‌ದಿಂದ ಅಮೆರಿಕನ್ ಏರ್‌ಲೈನ್ಸ್‌ದಲ್ಲಿ ಹೋಗಿ ಅಲ್ಲಿಂದ ಮುಂಬೈಗೆ ಬ್ರಿಟಿಷ್ ಏರ್‌ವೇಸ್‌ದಲ್ಲಿ ಲಂಡನ್ ಮಾರ್ಗವಾಗಿ ಬರಬೇಕಿತ್ತು. ಅಷ್ಟರಲ್ಲಿ ಡೆಟ್ರಾಯಿಟ್‌ದಿಂದ ಆಹ್ವಾನ ಬಂದಿತು. ಪುಣ್ಯಕ್ಕೆ ಆಸ್ಟಿನ್‌ದಿಂದ ಡೆಟ್ರಾಯಿಟ್‌ಗೆ ಹೋದರೂ ಅಲ್ಲಿಂದಲೇ ಬ್ರಿಟಿಷ್ ಏರ್‌ವೇಸ್ ಸಿಗುತ್ತಿತ್ತು. ಹೀಗಾಗಿ ನವೆಂಬರ್ 4ಕ್ಕೆ ಡೆಟ್ರಾಯಿಟ್‌ದಿಂದ ಪ್ರಯಾಣಿಸಲು ಬುಕ್ ಮಾಡಿದೆವು. ಶನಿವಾರ, ದಿ. 25ರ ಅಕ್ಟೋಬರದಂದು ಯೋಗೀಶ್ವರಿಯವರು ಭಕ್ತಿಯಿಂದ ಪಾದಪೂಜೆ ಮಾಡಿ, ಇಲ್ಲಿಂದ ಕೊಂಡು ತಂದಿದ್ದ ಮೈಸೂರು ಸಿಲ್ಕ್ ಕಾವಿ ಸೀರೆಯನ್ನು ಉಡುಗೊರೆಯಾಗಿ ಕೊಟ್ಟು ಕಾಣಿಕೆ ನೀಡಿದರು. ಮರುದಿವಸ ದೀಪಾವಳಿ ಪಾಡ್ಯ ಚನ್ನಬಸವ ಜಯಂತಿ. ಶ್ರೀಮತಿ ಜ್ಯೋತಿ ವಿಶ್ವಾಸ್ ಗರಡಿ ಅವರು ತಮ್ಮ ಮನೆಯಲ್ಲಿ ವಿಶೇಷ ಕಾರ್ಯಕ್ರಮವನ್ನು ಇಟ್ಟುಕೊಂಡರು. ಕನ್ನಡಿಗರನ್ನು ಮುಖ್ಯವಾಗಿ ಆಹ್ವಾನಿಸಿದ್ದರು. ''ಆಸ್ಟಿನ್‌ದಲ್ಲಿ ಈವರೆಗೂ ಮಾಡಿದ ಎಲ್ಲಾ ಭಾಷಣ ಇಂಗ್ಲೀಷಿನಲ್ಲೇ ಆಗಿವೆ. ನಿಮ್ಮ ಕನ್ನಡ ಭಾಷೆ ತುಂಬಾ ಚೆನ್ನಾಗಿದೆ ಎನ್ನುತ್ತಾರೆ. ಇಲ್ಲಿಯೂ ಅದನ್ನು ಕೇಳುವ ಆಸೆ'' ಎಂದರು. ಅಂದು ಉದಾತ್ತೀಕರಣ ತತ್ತ್ವ ಹೇಳಿ ಚನ್ನಬಸವಣ್ಣನವರ ವಚನವನ್ನು ವಿಶ್ಲೇಷಣೆ ಮಾಡಿದ್ದಲ್ಲದೆ ಮಾನವ ಜೀವನದ ಗುರಿ ಕುರಿತು ವಿವರಿಸಿದೆ. ಎಲ್ಲರೂ ತುಂಬಾ ಸಂತೋಷಪಟ್ಟರು. ತಮ್ಮ ಮಗನ ಮನೆಗೆ ಸಂದರ್ಶಕರಾಗಿ ಬಂದಿದ್ದ ಶ್ರೀ ಕೋ. ಚನ್ನಬಸಪ್ಪ ಮತ್ತು ಅವರ ಶ್ರೀಮತಿಯವರು ಅಲ್ಲಿದ್ದ ಮಗ ಶ್ರೀ ಪ್ರಭುದೇವ ಮತ್ತು ಸೊಸೆ ಸುಚೇತಾ ಅವರ ಸಂಗಡ ಬಂದು ಭಾಗವಹಿಸಿದ್ದರು.

ಅಕ್ಟೋಬರ್ 30, 2003 ರಂದು ಅಮೆರಿಕನ್ ಏರ್‌ಲೈನ್ಸ್ ಮೂಲಕ ಆಸ್ಟಿನ್‌ದಿಂದ ಹೊರಟೆನು. ಯೋಗೀಶ್ವರಿ ಮತ್ತು ಆಶಾ ಬೀಳ್ಕೊಟ್ಟರು. ಸುಮಾರು ಐದೂವರೆ ತಿಂಗಳು ಸರಿದುದೇ ತಿಳಿಯಲಿಲ್ಲ; ಇನ್ನು ಮನೆ-ಮನಗಳು ಬಣಗುಡುತ್ತವೆ ಎಂದು ಪರಿತಪಿಸಿದರು. ''ಮಾತಾಜಿ, ನೀವು ಹೋಗಬೇಡಿ. ಇಲ್ಲಿ ಸಂಜೆ ನೆನಹು ಯಾರು ಹೇಳಿಕೊಡುತ್ತಾರೆ ?'' ಎಂದು ಮುದ್ದು ಮುದ್ದಾಗಿ ಶರಣ್ಯ ಕೇಳಿದಳು. ''ನಿಮ್ಮ ಅತ್ತೆ ಹೇಳಿಕೊಡುತ್ತಾರೆ'' ಎಂದು ಉತ್ತರಿಸಿದೆ.

ಡೆಟ್ರಾಯಿಟ್ ತಲುಪುವಷ್ಟರಲ್ಲಿ ಶ್ರೀ ಜಯಕುಮಾರ್ ಪಾಳೇಗಾರ್ ಅವರ ಮಗ ಮತ್ತು ಮಗಳು ಬಂದು ಏರ್‌ಪೋರ್ಟನಲ್ಲಿ ಕಾಯುತ್ತಿದ್ದರು. ಮನೆಗೆ ಬರುವಷ್ಟರಲ್ಲಿ ಶ್ರೀಮತಿ ಜಯಕುಮಾರ್ ಸ್ವಾಗತಿಸಲು ಸಿದ್ಧವಾಗಿದ್ದರು. ಅವರಿಗೆ ವಿಮಾನ ನಿಲ್ದಾಣಕ್ಕೆ ಬರಲು ಆಗದುದಕ್ಕೆ ಕಾರಣ ಹೇಳಿ, ವಿಷಾದಿಸಿದರು. ಅಂದು ಹಾಲೋವಿನ್ ಹಬ್ಬ, ಹುಡುಗರು ದೊಂಬಿ ಮಾಡುತ್ತಾರಂತೆ. ನಮ್ಮ ದೇಶದಲ್ಲಿ

ಕಾಮನನ್ನು ಸುಡಲು ಬೇರೆಯವರ ಮನೆಯ ಕಟ್ಟಿಗೆ, ಸಾಮಗ್ರಿಗಳನ್ನು ಎಳೆದೊಯ್ಯುವಂತೆ ಇಲ್ಲಿಯೂ ಮಾಡುತ್ತಾರಂತೆ. ಸಣ್ಣ ಮಕ್ಕಳು, ಬಾಲಕರು ಮನೆಮನೆ ತಿರುಗುವರು. ಚಾಕಲೇಟ್, ಪೆಪ್ಪರ್‌ಮೆಂಟ್, ಕಾಂಡಿಗಳನ್ನು ಮನೆಯವರು ಬುಟ್ಟಿಗಟ್ಟಳೆ ತಂದಿಟ್ಟುಕೊಂಡು ಬಾಲಕ-ಬಾಲಕಿಯರು ಬಂದಾಗ ಕೊಡಬೇಕಂತೆ. ಕೊಡದಿದ್ದರೆ ಅಶ್ಲೀಲ ಭಾಷೆಯಲ್ಲಿ ಬೈಯುತ್ತಾ ಹೋಗುವರಂತೆ. ತರುಣರು ಬೀದಿ ಬೀದಿ ತಿರುಗುತ್ತ ಖಾಲಿ ಇದ್ದ ಮನೆ, ಹಳೆಯ ಹಾಳುಬಿದ್ದ ಮನೆಗಳಿಗೆ ಬೆಂಕಿ ಹಚ್ಚುವರಂತೆ. ಅಂದು ರಾತ್ರಿಯೆಲ್ಲ ಪೋಲೀಸರು ಗಸ್ತು ತಿರುಗುವರಂತೆ. ಶ್ರೀ ಜಯಕುಮಾರ್ ಎನ್.ಜಿ.ಓ ಸಂಸ್ಥೆಯ ಸದಸ್ಯರಾಗಿದ್ದು ಸ್ವಯಂ ಸೇವಕರಾಗಿ ಅವರೂ ರಾತ್ರಿ ಎಲ್ಲ ಗಸ್ತು ಮಾಡಿ, ಮರುದಿನ ಬೆಳಗಿನ ಜಾವ ಮನೆಗೆ ಬಂದರು. ಅಂತೂ ಮನುಷ್ಯನ ವಿಕೃತ ಸ್ವಭಾವ ತೃಪ್ತಿಗೆ ಎಲ್ಲಾ ದೇಶಗಳಲ್ಲೂ ಇಂಥ ವಿಕೃತ ಹಬ್ಬಗಳು ಇರುತ್ತವಲ್ಲ ಎನಿಸಿ ಆಶ್ಚರ್ಯವಾಯಿತು.

ಶನಿವಾರ ದಿ. 1-11-2003 ರಂದು ವಿ.ಎಸ್.ಎನ್.ಎ. ಡೆಟ್ರಾಯಿಟ್ ಘಟಕದವರು ಸಾವೂಹಿಕವಾಗಿ ದೀಪಾವಳಿ ಆಚರಣೆ ಇಟ್ಟುಕೊಂಡಿದ್ದರು. ಬಹಳ ಜನ ಸೇರಿದ್ದರು. ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿಸಿ ನಂತರ ಇಂಗ್ಲೀಷಿನಲ್ಲಿ ಪೂಜೆಯ ಮಹತ್ವ; ಇಷ್ಟಲಿಂಗದ ವೈಶಿಷ್ಟ್ಯ ಕುರಿತು ವಿವರಿಸಿದೆ. ಕಳೆದ ಬಾರಿ (1981) ನಾನು ಹೋಗಿದ್ದಾಗ ವಿ.ಎಸ್.ಎನ್.ಎ. (ವೀರಶೈವ ಸಮಾಜ ಆಫ್ ನಾರ್ತ್ ಅಮೆರಿಕಾ) ಡೆಟ್ರಾಯಿಟ್ ಘಟಕವನ್ನು ಉದ್ಘಾಟಿಸಿದ್ದೆ. ಬಹಳ ವ್ಯಾಪಕ ಪ್ರಚಾರ ಕೈಗೊಂಡು ಅನೇಕ ಕಡೆ ಪ್ರಾರಂಭಿಸಿದ್ದೆ. ಡೆಟ್ರಾಯಿಟ್‌ನವರು ಬಹಳ ಸ್ಮರಿಸಿಕೊಂಡರು. ಈ ಸಲದ ಭೇಟಿಯಲ್ಲಿ ಬಹಳ ದುಃಖಪೂರಿತ ಅನುಭವ ಎಂದರೆ ಡಾ|| ಶಿವಪ್ಪ ಹುಲಬನಿ ಮತ್ತು ಡಾ|| ಉರೇಕೊಂಡೆ ಗಣೇಶ್ ಲಿಂಗೈಕ್ಯರಾಗಿದ್ದ ಸಂಗತಿ. ಇಬ್ಬರೂ ಧರ್ಮನಿಷ್ಠರು, ಉದಾರಿಗಳು, ಸಹೃದಯರು.

ದಾವಣಗೆರೆಯ ಉರೇಕೊಂಡೆ ಮುಪ್ಪಮ್ಮ ಎಂಬ ಉದಾರ ದಾನಿಯ ಮಗ ಓ. ಗಣೇಶ್ ಅವರದು ಕರುಣಾಜನಕ ಸಾವು. ಒಮ್ಮೆ ಭಯಂಕರ ಮಳೆ ಬಂದು ಟ್ರಾಫಿಕ್ ದಟ್ಟಣೆ ಆಯಿತಂತೆ. ಪಕ್ಕದಲ್ಲೇ ಒಂದು ಚರ್ಚ್ ಆವರಣ. ಚರ್ಚ್ ಗೇಟಲ್ಲಿ ಹೋಗಿ ಇನ್ನೊಂದು ಕಡೆಯಿಂದ ಹೊರಹೋಗುವ ಬಯಕೆಯಿಂದ ಗಣೇಶರ ಕಾರು ಹೊರಟಿತು. ಅಲ್ಲಿ ಒಂದು ಕಡೆ ನೀರಿತ್ತು. ರಸ್ತೆಯೊಳಗಣ ನೀರು ಬಹಳಷ್ಟು ಇರಲಿಕ್ಕಿಲ್ಲ ಎಂದು ಗಣೇಶ್ ಕಾರು ಚಲಾಯಿಸಿದರು. ಆದರಲ್ಲಿ ಬಹಳ ತಗ್ಗು ಇತ್ತು ಕಾರಿನೊಳಗೆ ನೀರು ನುಗ್ಗಿ, ಕಾರು ಮುಳುಗಿತು. ಚರ್ಚಿನಲ್ಲಿ ನಿಂತು ನೋಡುತ್ತಿದ್ದ ಪಾದ್ರಿ ತಕ್ಷಣ ಪೋಲೀಸರಿಗೆ ಪೋನ್ ಮಾಡಿ ಕಾರನ್ನು ಮೇಲಕ್ಕೆ ಎತ್ತಿಸುವ ಪ್ರಯತ್ನ ಮಾಡಿದರಾದರೂ ಅಷ್ಟರೊಳಗೆ ಶ್ವಾಸಕೋಶಗಳಲ್ಲಿ ನೀರು ತುಂಬಿದ್ದು ಗಣೇಶ್ ಬದುಕಿ ಉಳಿಯಲಿಲ್ಲ. ಅವರ ಸಾವಿಗಾಗಿ ಮರುಗದವರೇ ಇಲ್ಲ. ಅವರ ಪತ್ನಿ ಕಾರ್ಯಕ್ರಮಕ್ಕೆ ಬಂದವರು ಮರುದಿನ ತಮ್ಮ ಎರಡನೆಯ ಮಗಳ ಶ್ರೀಮಂತ ಕಾರ್ಯ ಇರುವುದಾಗಿಯೂ ನಾನು ಬಂದು ಆಶೀರ್ವದಿಸಬೇಕೆಂದು ಆಹ್ವಾನಿಸಿದರು.

ಮರುದಿನ ಭಾನುವಾರ ದಿ. 2-11-2004 ರಂದು ಮಿಚಿಗನ್ ವಿಶ್ವವಿದ್ಯಾಲಯದ ಒಂದು ಹಾಲ್‌ದಲ್ಲಿ ವಿಶೇಷ ಉಪನ್ಯಾಸ. ''ಪೂರ್ವಾತ್ಯ ಮತ್ತು ಪಾಶ್ಚಿಮಾತ್ಯ ಮೌಲ್ಯಗಳ ಸಂಗಮ'' (Confluence of Eastern and Western values) ಎಂಬ ಬಗ್ಗೆ ನನ್ನ ಪ್ರವಚನ.

ಭಾಗವಹಿಸಿದ್ದ ಶ್ರೋತೃಗಳು ಬಿ.ಇ, ಎಂ.ಇ ಮುಗಿಸಿದವರು. ಪಿಹೆಚ್.ಡಿ ಮಾಡುವವರು.
ಮಾತ್ರವಲ್ಲದೆ ವೈದ್ಯರು, ಇನ್ನಿತರ ಕ್ಷೇತ್ರಗಳ ಗಣ್ಯರು. ಭಾರತದ ಎಲ್ಲ ರಾಜ್ಯಗಳ ವಿದ್ಯಾರ್ಥಿಗಳು,
ಕೆಲವು ಉಪನ್ಯಾಸಕರು, ಕಾರ್ಯಕ್ರಮದ ಸಂಯೋಜಕರು ಬೆಂಗಳೂರಿನ ಬಿ. ಜಯದೇವ್ ಅವರ
ಮಗ ಧ್ರುವ ಕುಮಾರ್. ಸುಂದರ ವಿಶ್ವವಿದ್ಯಾಲಯದ ಕ್ಯಾಂಪಸ್‌ದಲ್ಲಿ ಬಹು ಮಹಡಿ ಕಟ್ಟಡಗಳು.
ಒಂದು ಕೋಣೆಯಲ್ಲಿ ನಾಲ್ಕೈದು ಜನ ಎಂ.ಇ. ಅಭ್ಯಾಸಿ ಮಿತ್ರರು. ಇವರೇ ಸ್ವತಃ ಅಡಿಗೆ ಮಾಡಿದ್ದರು,
ಉಪನ್ಯಾಸದ ನಂತರ ಎಲ್ಲರಿಗೂ ಕೊಡಲು, ತರಕಾರಿ ಅನ್ನ, ಮೊಸರನ್ನ, ಕೇಸರಿಬಾತ್ ತಿಂದು ನಂತರ
ಎಲ್ಲರೂ ಆ ಹುಡುಗರನ್ನು ಹೊಗಳಿದ್ದೂ ಹೊಗಳಿದ್ದೆ.

''ಇಲ್ಲಿ ಪಾಶ್ಚಿಮಾತ್ಯ ದೇಶಗಳ ವಿದ್ಯಾರ್ಥಿಗಳು ಮತ್ತು ಪೂರ್ವದೇಶಗಳವರು ವಿದ್ಯಾಭ್ಯಾಸಕ್ಕಾಗಿ ಬಂದಿದ್ದೀರಿ. ಶಿಕ್ಷಣದ ವಿಷಯದಲ್ಲಿ ಎರಡು ಮಾತಿಲ್ಲ ಅಷ್ಟು ಶಿಸ್ತು ಬದ್ಧವಾದ ಆಳವಾದ ತರಬೇತಿ ಸಿಗುತ್ತದೆ. ಆದರೆ ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಒಂದು ಕೊರತೆ ಇದೆ. ಹಾಗೆಂದ ಮಾತ್ರಕ್ಕೆ ಪೂರ್ವಾತ್ಯ ಸಂಸ್ಕೃತಿ ಪರಿಪೂರ್ಣ, ಪಾಶ್ಚಿಮಾತ್ಯ ಮೌಲ್ಯಗಳೆಲ್ಲವೂ ಅರ್ಥಹೀನ ಎಂದು ನನ್ನ ಅಭಿಪ್ರಾಯವಲ್ಲ. ಎರಡರಲ್ಲೂ ಕೆಲವು ಒಳ್ಳೆಯ ಲಕ್ಷಣಗಳಿವೆ, ಕೆಲವು ದೋಷಗಳಿವೆ. ಇಂದು ಈ ಜಗತ್ತು ಸುಖ-ಸಂತೋಷ-ಸಂತೃಪ್ತಿಯಿಂದ ಸಾಗಬೇಕಾದರೆ ಎರಡೂ ಸಂಸ್ಕೃತಿಗಳಲ್ಲಿರುವ ಒಳ್ಳೆಯ ಲಕ್ಷಣಗಳು, ಮೌಲ್ಯಗಳು ಸಂಗಮವಾಗಬೇಕು.

ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿರುವ ಕೆಲವು ಒಳ್ಳೆಯ ಲಕ್ಷಣಗಳೆಂದರೆ ಸಾಹಸ ಶೀಲತೆ, ವೈಜ್ಞಾನಿಕ ಮನೋಭಾವ, ಅನ್ವೇಷಕ ಗುಣ, ಶಿಸ್ತು, ಗುರಿ ಸಾಧಿಸುವಲ್ಲಿ ಅರ್ಪಣ ಮನೋಭಾವ. ನಾವು ವಾಸಿಸುವ ಈ ಪೃಥ್ವಿ ಬಹಳ ದೊಡ್ಡದು ಎಂಬ ಕಲ್ಪನೆ ಇದ್ದಾಗಲೇ ಸಮುದ್ರ ಯಾನ ಮಾಡುವ, ಹೊಸ ಹೊಸ ಸ್ಥಳಗಳ ಅನ್ವೇಷಣೆ ಮಾಡುವ ಸಾಹಸ ಶೀಲತೆಯನ್ನು ಐರೋಪ್ಯ ದೇಶಗಳವರಲ್ಲಿ ಕಾಣುತ್ತೇವೆ. ಹೀಗಾಗಿ ಅವರು ಜಗತ್ತಿನ ಎಲ್ಲೆಡೆ ಹರಡಿದರು; ಅವರ ಭಾಷೆಗಳನ್ನು ಇತರರಿಗೆ ಕಲಿಸಿದರು. ಒಮ್ಮೊಮ್ಮೆ ಇದು ಆಕ್ರಮಣಶೀಲತೆ ಎನಿಸಿದರೂ ಒಂದು ವೇಳೆ ಇಂಗ್ಲೀಷ್ ಭಾಷೆ ಸಂಪರ್ಕ ಭಾಷೆಯಾಗದಿದ್ದರೆ ನಾವೆಲ್ಲೋ ನೀವೆಲ್ಲೋ. ಭೂಮಿ ಇಷ್ಟು ಚಿಕ್ಕದಾಗುತ್ತಿರಲಿಲ್ಲ. ವಿಜ್ಞಾನವು ಐರೋಪ್ಯ ದೇಶಗಳಲ್ಲಿ ಅಗಾಧ ಪ್ರಗತಿ ಸಾಧಿಸಿತು. ಪಾಶ್ಚಿಮಾತ್ಯರು ಅನೇಕರು ಬೇರೆಬೇರೆ ದೇಶಗಳಲ್ಲಿ ನೆಲೆಸಿದರು. ಅಲ್ಲಿಯ ಭಾಷೆ, ಶಾಸ್ತ್ರ ಸಂಸ್ಕೃತಿ ಅಧ್ಯಯನ ಮಾಡಿ ಅದನ್ನು ಇಂಗ್ಲೀಷ್ ಭಾಷೆಯ ಮೂಲಕ ಜಗತ್ತಿಗೆ ಪರಿಚಯ ಮಾಡಿಸಿದರು. ಆದರೆ ಈ ದೇಶಗಳ ಸಂಸ್ಕೃತಿಯಲ್ಲಿ ಕಾಣುವ ಬಹುದೊಡ್ಡ ಕೊರತೆ ಎಂದರೆ ಲೈಂಗಿಕವಾದ ಸ್ವೇಚ್ಛೆ; ಭೋಗಲಾಲಸೆಯ ಜೀವನ ವಿಧಾನ, ಅಪರಿಪೂರ್ಣ ಮತ್ತು ಆತ್ಮಘಾತುಕವಾದ ಕುಟುಂಬದ ಕಲ್ಪನೆ.

ಮಾನವ ಜೀವನದಲ್ಲಿ ಪ್ರೀತಿ, ಮಮತೆ, ವಾತ್ಸಲ್ಯಗಳು ವ್ಯಕ್ತಿಯನ್ನು ಅವಿವೇಕದ ದಾರಿ ತುಳಿಯದಂತೆ ನಿಯಂತ್ರಿಸುವ ಶಕ್ತಿಗಳು. ಇವುಗಳ ಕೊರತೆಯಿಂದಾಗಿ ಪಾಶ್ಚಿಮಾತ್ಯ ಸಮಾಜವು ಛಿದ್ರವಾಗುತ್ತಿದೆ. ಸಾಮಾಜಿಕ ಅಶಾಂತಿಗೆ ಮಾನಸಿಕ ಖಿನ್ನತೆಗೆ ದಾರಿ ಮಾಡಿಕೊಡುತ್ತಿದೆ. ಭಾರತೀಯರು ಕರ್ಮವಾದದ ದಾಸರಾದ್ದರಿಂದ ಅವರಲ್ಲಿ ಸಾಹಸ ಶೀಲತೆ ಕಡಿಮೆಯಾಗಿ ಅಲ್ಪತೃಪ್ತರಾದರು. ಬಹಳಷ್ಟು ಹಿಂದೆಯೇ ಕಣಾದನು ಅಣುವಾದವನ್ನು ತಿಳಿಸಿದ್ದ; ಈ ಜಗತ್ತೆಲ್ಲವೂ

ಸಣ್ಣಸಣ್ಣ ಕಣಗಳಿಂದಾಗಿದೆ ಎಂದು ಬಹಳ ಹಿಂದೆಯೇ ಹೇಳಿದ್ದ. ಚರಕ-ಶುಶ್ರುತರು ಶಸ್ತ್ರಚಿಕಿತ್ಸಾ
ಪರಿಣಿತರಾಗಿದ್ದರು. ಅಲ್ಲಿ ಶಾಸ್ತ್ರದಾಸ್ಯವಿದ್ದಂತೆಯೇ, ವೈಚಾರಿಕ ಸ್ವಾತಂತ್ರ್ಯ, ವಿಚಾರ ವೈವಿಧ್ಯತೆ ಇದೆ.
ಆದರೆ ಅದೆಲ್ಲವನ್ನು ಮೆಟ್ಟಿನಿಂತು ಮೂಢನಂಬಿಕೆ ಬೆಳೆದಿದೆ. ಇಂಥ ಕಳೆಗಳ ಮಧ್ಯದಲ್ಲೂ ಜೀವನದ
ಅಡಿಪಾಯ ಧರ್ಮ-ಅಧ್ಯಾತ್ಮಗಳೇ ಆಗಿವೆ. ಭಾರತೀಯ ಸಂಸ್ಕೃತಿಯ ಗಟ್ಟಿತನಕ್ಕೆ ದೇವಶ್ರದ್ಧೆ ಮತ್ತು
ಕೌಟುಂಬಿಕ ನಂಬಿಕೆ ಕಾರಣವಾಗಿದೆ. ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಮಕ್ಕಳು ಹದಿನೇಳು-ಹದಿನೆಂಟು
ದಾಟುತ್ತಲೇ ತಾಯಿ ತಂದೆಯರ ವಾತ್ಸಲ್ಯದ ಪರಿಧಿಯಿಂದ ಆಚೆ ಹೋಗುತ್ತಾರೆ. ಆದರೆ ಮಕ್ಕಳು
ಸುರಕ್ಷಿತವಾಗಿ ತಮ್ಮ ಕಾಲಮೇಲೆ ತಾವು ನಿಲ್ಲುವವರೆಗೂ ತಾಯಿತಂದೆಯರ ಪೋಷಣೆ ಭಾರತೀಯ
ಮಕ್ಕಳಿಗೆ ದೊರೆಯುತ್ತದೆ. ಭಾರತದ ಗಟ್ಟಿತನ ಇರುವುದೇ ದಾಂಪತ್ಯದ ನಿಷ್ಠೆಯಲ್ಲಿ, ಕೌಟುಂಬಿಕ
ವಾತ್ಸಲ್ಯದಲ್ಲಿ. ಈಗ ಅಲ್ಲಿಯೂ ಸಹ ಕೌಟುಂಬಿಕ ಸಂಘಟನೆ ಸಡಿಲುತ್ತಿದೆ. ಅನಕ್ಷರತೆ, ಬಡತನದ
ದೃಷ್ಟಿಯಿಂದ ಭಾರತವು ಮುಂದುವರಿದ ದೇಶಗಳೊಡನೆ ಸ್ಪರ್ಧಿಸಲಾರದಾದರೂ ಇಡೀ ಜಗತ್ತಿಗೆ
ವಿಪುಲವಾದ ಅಧ್ಯಾತ್ಮಿಕ ಮೌಲ್ಯಗಳನ್ನು, ಯೋಗ ಧ್ಯಾನ, ದರ್ಶನ ಶಾಸ್ತ್ರವನ್ನು ಕೊಟ್ಟ ಕಾರಣ
ಹೆಮ್ಮೆಯಿಂದ ತಲೆ ಎತ್ತಿ ಮೆರೆಯಬಲ್ಲದು.

12ನೆಯ ಶತಮಾನದಲ್ಲಿ ಆಗಿ ಹೋದ ಮಹಾನ್ ದಾರ್ಶನಿಕ ಚಿಂತಕ ಬಸವಣ್ಣನವರು
ಐಹಿಕ ಜೀವನದಲ್ಲಿ ಪರಮಾರ್ಥವನ್ನು ಹೇಗೆ ಬೆರೆಸಬಹುದೆಂಬುದಕ್ಕೆ ಮಾದರಿಯಾಗಿದ್ದರು. ಅನೇಕ
ಪಾಶ್ಚಿಮಾತ್ಯರು ಭಾರತೀಯ ತತ್ತ್ವಜ್ಞಾನವು ಜಗತ್ತನ್ನು, ಜೀವನವನ್ನು ಮಿಥ್ಯವೆಂದು, ಮಾಯೆಯೆಂದು
ಜರಿದು ಐಹಿಕ ಬದುಕನ್ನು ಕಡೆಗಣಿಸುತ್ತದೆ ಎಂದು ಆರೋಪಿಸುತ್ತಾರೆ. ಇದು ತಪ್ಪು. ಕೀಟ್ಸ್ ಕವಿ ''ಈ
ಜಗತ್ತು ಆತ್ಮರುಗಳನ್ನು ಪರಿಪಕ್ವಗೊಳಿಸುವ ಕಾರ್ಯಾಗಾರ'' ಎಂದು ಹೇಳುವ ಬಹುಪೂರ್ವದಲ್ಲಿಯೇ,
''ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ'' ಎಂದು ಬಸವಣ್ಣನವರು ಹೇಳಿದರು. ಮರ್ತ್ಯಲೋಕ
ದೇವರ ಕಮ್ಮಟವಾದಂತೆ, ದೇಹವು ದೇವನನ್ನು ಒಲಿಸುವ ಸಾಧನ ಎಂದರು ಬಸವಣ್ಣನವರು.
ಸುಮಾರು ಐದೂವರೆ ತಿಂಗಳ ನನ್ನ ಅಮೆರಿಕಾ ಪ್ರವಾಸದಲ್ಲಿ ಒಂದು ವಿಷಯ ಗಮನಿಸಿದೆ.
ಸೆಪ್ಟಂಬರ್ 11ರ ದುರ್ಘಟನೆಯ ನಂತರ ಅಮೆರಿಕನ್ನರು ಸದಾ ಭಯದ ನೆರಳಿನಲ್ಲಿ ಬದುಕುತ್ತಿದ್ದಾರೆ.
ಇದಕ್ಕೆ ಕಾರಣ ಮುಸಲೀಮರ ಜೆಹಾದ್. ಮಾನವ ಮಾನವರನ್ನು ಬೆಸೆಯಬೇಕಾದ ಧರ್ಮವೇ ಇಂದು
ಪರಸ್ಪರರನ್ನು ಒಡೆಯುತ್ತಿರುವುದರಿಂದ ಮಾನವರಲ್ಲಿ ಅಭದ್ರತೆ, ಅಸುರಕ್ಷತೆಯ ಭಾವ ಬಲಿಯುತ್ತಿದೆ.
ಇದಕ್ಕೆ ಕಾರಣ ವಿಜ್ಞಾನದ ದುರುಪಯೋಗ.

ಶಿವಪುರಾಣದಲ್ಲಿ ಒಂದು ಕಥೆ ಬರುತ್ತದೆ. ಒಮ್ಮೆ ದೇವತೆಗಳು ಮತ್ತು ಅಸುರರು ಸಮುದ್ರ
ಮಥನವನ್ನು ಮಾಡಿದರಂತೆ. ಆಗ ಅಷ್ಟೈಶ್ವರ್ಯಗಳು ಸಿಕ್ಕವಂತೆ. ಅವನ್ನು ಪಡೆಯಲು ದೇವತೆಗಳು
ಸಾಲುಗಟ್ಟಿದರು-ಅದೇ ಮಥನದ ಫಲವಾಗಿ ವಿಷವು ಬಂದಾಗ ಅದನ್ನು ದಕ್ಕಿಸಿಕೊಳ್ಳಲಾಗಲಿಲ್ಲ. ಆಗ
ಎಲ್ಲರೂ ಯೋಗಿರಾಜ ಶಿವನ ಮೊರೆಹೊಕ್ಕರು. ಆತ ವಿಷವನ್ನು ಕುಡಿದು ಜಗತ್ತನ್ನು ಸಂರಕ್ಷಿಸಿದ.
ಅದೇ ರೀತಿ, ಇಂದು ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಎನ್ನುವವರು ನಿಸರ್ಗದ ಸಮುದ್ರವನ್ನು
ಮಥಿಸುತ್ತಿರುವರು ಅದರ ಫಲವಾಗಿ ಹಲವಾರು ವೈಜ್ಞಾನಿಕ ಕೊಡುಗೆಗಳು ಲಭ್ಯವಾಗುತ್ತಿವೆ. ವಿದ್ಯುತ್,
ಫ್ರಿಜ್, ದೂರವಾಣಿ, ದೂರದರ್ಶನ ಇವೆಲ್ಲವೂ ವಿಜ್ಞಾನದ ಕೊಡುಗೆ. ಮಾನವರು ಪೈಪೋಟಿಯ

ಮೇಲೆ ಅವನ್ನು ಆಯ್ಕೆ ಮಾಡಿಕೊಳುತ್ತಾರೆ. ಆದರೆ ಇದೇ ವಿಜ್ಞಾನದ ಫಲವಾಗಿ ಮಾರಕಾಸ್ತ್ರಗಳು, ಬಾಂಬುಗಳು ಇತ್ಯಾದಿ ಹುಟ್ಟಿ ಮಾನವ ಕುಲವನ್ನೇ ವಿನಾಶದ ಅಂಚಿಗೆ ತಳ್ಳುತ್ತಿವೆ. ಆದ್ದರಿಂದ ಇಂಥ ವಿಪತ್ತಿನಿಂದ ಮಾನವನನ್ನು ರಕ್ಷಿಸಬೇಕಾದರೆ ಅಧ್ಯಾತ್ಮ-ಯೋಗ ಇವುಗಳಿಂದಲೇ ಸಾಧ್ಯ. ಅದಕ್ಕಾಗಿ ಇಂದು ಪಾಶ್ಚಿಮಾತ್ಯ ಜಗತ್ತಿನ ವೈಜ್ಞಾನಿಕ ಸಾಧನೆ ಭಾರತದ ಅಧ್ಯಾತ್ಮವಿದ್ಯೆ ಇವುಗಳ ಸಮ್ಮಿಳನವಾಗಬೇಕಾಗಿದೆ. ನೀವೆಲ್ಲರೂ ವಿದ್ಯಾವಂತರು, ಬುದ್ಧಿ ಜೀವಿಗಳು. ಎಷ್ಟೇ ವಿದ್ಯಾವಂತರಾದರೂ ನಿಜವಾದ ಆತ್ಮ ಸಂಪತ್ತನ್ನು ಗಳಿಸುವುದನ್ನು ಮರೆಯಬಾರದು.

ಒಂದು ಊರಿನಲ್ಲಿ ಓರ್ವ ಶ್ರೀಮಂತನಿದ್ದ; ಅವನು ಅಷ್ಟೇ ಗುಣವಂತನೂ ಅಹುದು. ಬೇರೊಬ್ಬ ದುರ್ಜನನು ಈತನನ್ನು ಕೋರ್ಟಿಗೆ ಎಳೆದ. ಇವನ ತಪ್ಪು ಏನೂ ಇಲ್ಲದಿದ್ದರೂ ಆ ಸಜ್ಜನನಾದ ಶ್ರೀಮಂತನು ಕೋರ್ಟಿಗೆ ಹೋಗಲೇಬೇಕಾಯಿತು. ಆಗ ಅವನಿಗೆ ಸಾಕ್ಷಿಗಳ ಅಗತ್ಯ ಉಂಟಾಯಿತು. ಓರ್ವ ಮಿತ್ರನನ್ನು ಸಾಕ್ಷಿದಾರನಾಗಲು ಕೇಳಿದ. ಅವನು ಹೇಳಿದ, "ಕ್ಷಮಿಸು, ನಾನು ಮನೆಯ ಹೊಸ್ತಿಲು ದಾಟಿ ಹೊರಗೆ ಬರುವುದಿಲ್ಲ. ಆಗ ಶ್ರೀಮಂತ ಹೇಳಿದ. ನಾನು ನಿನಗಾಗಿ ಎಷ್ಟು ಶ್ರಮಿಸಿದ್ದೇನೆ. ಎಷ್ಟು ಉಪಕಾರ ಮಾಡಿದ್ದೇನೆ. ಈಗ ನೀನು ಸಮಯ ಬಂದಾಗ ನೀನು ಸಹಕರಿಸುವುದಿಲ್ಲ ಎಂದರೆ ಹೇಗೆ ? ಇರಬಹುದು. ಆದರೆ ನಾನಾ ನನ್ನ ಮನೆಯ ಹೊಸ್ತಿಲು ದಾಟಿ ಹೊರಬರುವುದಿಲ್ಲ". ವಿಷಾದಿಸಿದ ಶ್ರೀಮಂತ ಇನ್ನೊಬ್ಬ ಮಿತ್ರನ ಬಳಿಗೆ ಹೋದ. ಅವನು ಹೇಳಿದ, "ನಾನು ಬರುತ್ತೇನೆ. ಆದರೆ ಕೋರ್ಟ್ ಬಾಗಿಲವರೆಗೆ ಮಾತ್ರ". ಮೂರನೆಯ ಮಿತ್ರ ಮಾತ್ರ ಪೂರ್ತಿ ಒಳಗೆ ಬಂದು ಸಾಕ್ಷಿ ಹೇಳಿದ. ಆಗ ಕೇಸು ಇವನಂತೆಯೇ ತೀರ್ಪಾಯಿತು.

ಇದೇ ರೀತಿ ಒಬ್ಬ ವ್ಯಕ್ತಿ ಸತ್ತಾಗ ಅವನನ್ನು ಚಟ್ಟದ ಮೇಲೆ ಇಟ್ಟುಕೊಂಡು ಸ್ಮಶಾನಕ್ಕೆ ಒಯ್ಯುವರು. ಆಗ ಅವನ ಸಂಗಡ ಅವನು ಗಳಿಸಿದ ಆಸ್ತಿ, ಹೊಲ, ತೋಟ, ಗದ್ದೆ, ಮನೆ, ಸಂಪತ್ತು ಯಾವುದೂ ಹಿಂಬಾಲಿಸದೆ ಹೊಸ್ತಿಲ ಒಳಗೇ ಉಳಿಯುತ್ತವೆ. ಎರಡನೆ ಪ್ರಕಾರದ ಸಂಪತ್ತಾದ ಹೆಂಡತಿ, ಗಂಡ, ಮಿತ್ರರು, ಬಂಧು ಬಳಗ ಹಿಂಬಾಲಿಸಬಲ್ಲರು. ಎಲ್ಲಿಯವರೆಗೆ ಸ್ಮಶಾನದವರೆಗೆ! ಸಮಾಧಿಯ ತಗ್ಗಿನ ಬಳಿ ನಿಂತು ಅವರು ಸಾಕ್ಷಿ ಹೇಳುವರು. ಇನ್ನು ಮರಣಾನಂತರವು ಹಿಂಬಾಲಿಸಿ ದೇವರ ಎದುರಲ್ಲಿ ಸಾಕ್ಷಿ ಹೇಳುವ ತತ್ತ್ವವೆಂದರೆ ಆತ್ಮಜ್ಞಾನ. ಆದ್ದರಿಂದ ಭೌತಿಕ ಸಂಪತ್ತು, ನೈತಿಕ ಸಂಪತ್ತು, ಅಧ್ಯಾತ್ಮಿಕ ಸಂಪತ್ತು- ಮೂರನ್ನು ವಿವೇಕಿಯಾದವನು ಗಳಿಸಬೇಕು. ಆಗ ಮಾತ್ರ ಜೀವನವು ಪರಿಪೂರ್ಣ. ಮಾನವನು ಸದಾ ಸುಖದ ಅನ್ವೇಷಣೆಯಲ್ಲಿರುವ. ಅವನು ಪಡೆಯುವ ಸುಖಗಳಲ್ಲಿ 3 ಪ್ರಕಾರ ಸುಖ(pleasure)ಸಂತೋಷ (Happiness)ಮತ್ತು ಆನಂದ (bliss). ಈ ಮೂರೂ ಸ್ತರದ ಸುಖವನ್ನು ಹೊಂದಬೇಕೆಂದಿದ್ದರೆ ವಿಜ್ಞಾನ, ನೀತಿಶಾಸ್ತ್ರ ಅಧ್ಯಾತ್ಮ ಜ್ಞಾನ ಮೂರು ಬೇಕು. ಆಗ ಬದುಕಿನಲ್ಲಿ ಸುಖ, ಶಾಂತಿ, ಸಮಾಧಾನ ಪ್ರಾಪ್ತವಾಗುತ್ತವೆ" ಎಂದು ಹೇಳಿದೆ. ಭಾಷಣದ ಬಳಿಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಂಡರು. ಧ್ರುವ ಮತ್ತು ಮಿತ್ರರು ಕೊಟ್ಟ ರುಚಿಯಾದ ಊಟ, ನಮ್ಮ ಪ್ರವಚನದಿಂದ ಪಡೆದುಕೊಂಡ ನೆತ್ತಿಯ ಊಟ - ಎರಡರಿಂದಲೂ ಸಂತೃಪ್ತರಾದರು. ಅಲ್ಲಿಯ ಶ್ರೋತೃಗಳು "ನಮಗೆ ಇನ್ನಷ್ಟು ಉಪನ್ಯಾಸಗಳು ಬೇಕು" ಎಂದರು.

ಮುಂದುವರಿಯುವುದು........



॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

(ಕೂಡಲಸಂಗಮದ ಬಸವ ಧರ್ಮ ಪೀಠದ ಮಾರ್ಗದರ್ಶನದ)

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್ (ರಿ.) ಆಶ್ರಯದಲ್ಲಿ

ದಿ : 3-10-2004 ರಿಂದ 17-10-2004ರವರೆಗೆ



ಬಸವ ಧರ್ಮ ತರಬೇತಿ ಕಮ್ಮಟ

ಮತ್ತು

ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ

ಸರ್ವರಿಗೂ ಆದರದ ಸುಸ್ವಾಗತ

ಪ್ರಾಯೋಜಕರು:

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್ (ರಿ.)

ಉಳವಿ ರಸ್ತೆ, ರೇಲ್ವೆಗೇಟ್ ಹತ್ತಿರ, ಧಾರವಾಡ-580003

ದೂರವಾಣಿ : 0836-2773005/5577965

ಬಸವ ಧರ್ಮ ತರಬೇತಿ ಕಮ್ಮಟ ಅಕ್ಟೋಬರ್ 3 ರಿಂದ 17ರವರೆಗೆ

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್ ಮುಂಬೈ ಟ್ರಸ್ಟ್ ಆಕ್ಟ್ ಪ್ರಕಾರ ನೊಂದಾಯಿತವಾದ ಸಂಸ್ಥೆಯಾಗಿದ್ದು (ನೋಂದಣಿ ಸಂಖ್ಯೆ A 3052 DWR) ಪ್ರತಿ ರವಿವಾರ ಬೆಳಿಗ್ಗೆ 11 ಗಂಟೆಯಿಂದ ಶರಣ ಸಂಗಮ ಸಾಮೂಹಿಕ ಪ್ರಾರ್ಥನೆ, ಪ್ರವಚನ ಮತ್ತು ಪ್ರಸಾದ ದಾಸೋಹಗಳನ್ನು ನಡೆಸುತ್ತದೆ. ರಾಷ್ಟ್ರೀಯ ಬಸವ ದಳ ಮತ್ತು ಲಿಂಗಾಯತ ಧರ್ಮ ಮಹಾಸಭಾಗಳ ಸಹಯೋಗದೊಡನೆ ಶರಣರ ಜಯಂತಿಗಳನ್ನು, ಶ್ರಾವಣ ಮಾಸದಲ್ಲಿ ತಿಂಗಳು ಪೂರ್ತಿ ಮನೆಮನೆಗಳಲ್ಲಿ ಬಸವ ಜ್ಯೋತಿ ಕಾರ್ಯಕ್ರಮಗಳನ್ನು ನಡೆಸುತ್ತದೆ. ಪ್ರಸ್ತುತ ಟ್ರಸ್ಟ್ ದೇವ(ಭಾನು)ವಾರ ದಿ. 3-10-2004 ರಿಂದ ದಿ. 17-10-2004 ರವರೆಗೆ 15 ದಿವಸಗಳ ಕಾಲ ಬಸವ ತತ್ತ್ವ ತರಬೇತಿ ಕಮ್ಮಟವನ್ನು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಬಸವ ಮಂಟಪದಲ್ಲಿ ಹಮ್ಮಿಕೊಂಡಿದೆ. ಲೌಕಿಕ ಸುಖದಲ್ಲಿಯೇ ತಲ್ಲೀನನಾದ ಮಾನವನಿಗೆ ನಿಜ ಶಾಂತಿ ದೊರೆಯುವುದು ಧರ್ಮ-ಅಧ್ಯಾತ್ಮಗಳಲ್ಲಿ ಮಾತ್ರ. ಹೀಗಾಗಿ ಇಂದ್ರಿಯ ಮುಖಿಯಾದ ಮಾನವನನ್ನು ದೇವಮುಖಿ ಮತ್ತು ಅಂತರ್ಮುಖಿಯನ್ನಾಗಿ ಮಾಡಲು ಧಾರ್ಮಿಕ ತರಬೇತಿ ಕಮ್ಮಟಗಳು ಅತ್ಯಂತ ಉಪಯುಕ್ತವಾಗುತ್ತವೆ. ಅಕ್ಕಮಹಾದೇವಿ ಆಶ್ರಮ ಟ್ರಸ್ಟ್ ಸಂಯೋಜಿಸಿರುವ ಈ ತರಬೇತಿ ಕಮ್ಮಟದಲ್ಲಿ ಪ್ರಾಯೋಗಿಕ ಶಿಕ್ಷಣವು ದೊರೆತು ಮುಮುಕ್ಷುವನ್ನು ಪರಿಪಕ್ವಗೊಳಿಸುವುದರ ಜೊತೆಗೆ ಇನ್ನಿತರರನ್ನು ಮನವೊಲಿಸಿ ಹೇಗೆ ಅಧ್ಯಾತ್ಮ ಜೀವಿಗಳನ್ನಾಗಿ ಮಾಡಬೇಕೆಂಬ ಪ್ರಚಾರ ಕಲೆಯ ತರಬೇತಿ ಸಹ ಲಭ್ಯವಾಗುತ್ತದೆ. ಧರ್ಮ-ದೇವರು, ಆತ್ಮ-ಮೋಕ್ಷ ಇತ್ಯಾದಿ ಸಂಗತಿ ಕುರಿತು ಇರುವ ಸಂದೇಹಗಳನ್ನು ಪರಿಹರಿಸಿಕೊಳ್ಳುವ ಸದವಕಾಶವೂ ಲಭ್ಯವಾಗುತ್ತದೆ.

ಸುಪ್ರಭಾತದ 5-30 ರಿಂದ ಪ್ರಾರಂಭವಾಗುವ ತರಬೇತಿಯು ರಾತ್ರಿ 10ರವರೆಗೆ ನಡೆಯುತ್ತದೆ

1. ದಿನ ನಿತ್ಯ ಸಂಜೆ ಒಂದೊಂದು ವಿಷಯದ ಮೇಲೆ ಪ್ರವಚನ.
2. ಸುಪ್ರಭಾತದಲ್ಲಿ ಯೋಗಾಸನ, ಪ್ರಾಣಾಯಾಮ, ಧ್ಯಾನ, ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ತ್ರಾಟಕಯೋಗ.
3. ವಚನ ಚಿಂತನೆ, ವಿಶ್ಲೇಷಣೆ, ವಚನ ಲೇಖನ ಮುಂತಾದವುಗಳ ಅಭ್ಯಾಸ ಜರುಗುತ್ತದೆ.
4. ಸಂಜೆಯ ವೇಳೆ ವಯೋಭೇದವಿಲ್ಲದೆ ಆಟೋಟಗಳಿರುತ್ತವೆ.
5. ರಾತ್ರಿ 9 ರಿಂದ ರಸ ಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮ.
6. ಆರೋಗ್ಯ ಭಾಗ್ಯ ಕುರಿತು ಉಪನ್ಯಾಸ, ನಿಸರ್ಗೋಪಚಾರ ಕುರಿತು ಮಾಹಿತಿ.
7. ಗೃಹ ಪ್ರವೇಶ, ವಿವಾಹ ವಿಧಿ, ಲಿಂಗಧಾರಣೆ, ನಾಮಕರಣ, ಶವ ಸಂಸ್ಕಾರ ಮುಂತಾದ ವಿಧಿ-ವಿಧಾನಗಳನ್ನು ನೆರವೇರಿಸುವ ಬಗ್ಗೆ ತರಬೇತಿ ನೀಡಲಾಗುವುದಲ್ಲದೆ ಕ್ರಿಯಾ ಮೂರ್ತಿ ದೀಕ್ಷೆಯನ್ನು ಸಹ ನೀಡಿ ತರಬೇತಿ ಹೊಂದಿದವರಿಗೆ ಮಾನ್ಯತಾ ಪತ್ರ (Certificate) ಕೊಡಲಾಗುವುದು.

ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಈ ತರಬೇತಿ ಕಮ್ಮಟದಲ್ಲಿ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಶರಣ. ಮಹಾಂತೇಶ ಯೋಗಾಚಾರ್ಯ, ಶರಣ. ಸದಾನಂದ ಸ್ವಾಮಿ ಮುಂತಾದವರು ಯೋಗಾಸನ, ಪ್ರಾಣಾಯಾಮ ಮತ್ತು ಪ್ರವಚನದ ತರಬೇತಿ ಕೊಡಲಿರುವರು. ಆಗಾಗ ಆಯುರ್ವೇದ ಚಿಕಿತ್ಸೆ, ನಿಸರ್ಗೋಪಚಾರ ಮುಂತಾದುವುಗಳ ಬಗ್ಗೆ ಸಹ ತರಗತಿಗಳು ನಡೆಯುತ್ತವೆ.

ಶಿಬಿರಾರ್ಥಿಗಳಿಗೆ ನಿಯಮಗಳು

ಶರಣ ಬಂಧುಗಳೇ,

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಪ್ರತಿವರ್ಷವೂ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳಲ್ಲಿ ವಿವಿಧ ಸ್ಥಳಗಳಲ್ಲಿ ನಡೆಸುವ ಬಸವ ತತ್ತ್ವ ತರಬೇತಿ ಕಮ್ಮಟವನ್ನು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ನಡೆಸಲು ಒಪ್ಪಿಗೆ ನೀಡಿರುವುದು ನಮ್ಮ ಸುದೈವವೆಂದು ಭಾವಿಸಿ ತರಬೇತಿ ಕಮ್ಮಟದ ಹೊಣೆಗಾರಿಕೆಯಲ್ಲಿ ಪಾಲ್ಗೊಳ್ಳಲು ಬಯಸಿದ್ದೇವೆ. ಶಿಬಿರಾರ್ಥಿಗಳು ಮೂರು ರೀತಿಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಿದೆ.

1. ಪೂರ್ಣ ಶುಲ್ಕ ಸಹಿತವಾಗಿ : 15 ದಿವಸಗಳ ಊಟ-ವಸತಿ-ತರಬೇತಿಯ ವೆಚ್ಚವೆಂದು 450 (ಒಬ್ಬರಿಗೆ ನಾಲ್ಕುನೂರಾ ಐವತ್ತು) ರೂ.ಗಳನ್ನು ನಿಗದಿ ಪಡಿಸಲಾಗಿದೆ. ಆರ್ಥಿಕವಾಗಿ ಸಶಕ್ತರಾದವರು ಶಿಬಿರ ಶುಲ್ಕವನ್ನು ಕೊಟ್ಟರೆ ಬಹಳ ಉಪಕಾರವಾಗುವುದು.
2. ರಿಯಾಯಿತಿ ಶುಲ್ಕ ಸಹಿತವಾಗಿ : ವಿದ್ಯಾರ್ಥಿಗಳಿಗೆ ಮತ್ತು ಪೂರ್ಣಶುಲ್ಕ ಭರಿಸಲು ಸಾಧ್ಯವಿಲ್ಲದವರಿಗೆ 15 ದಿವಸಗಳ ಶಿಬಿರ - ಶುಲ್ಕದಲ್ಲಿ 150 ರೂಗಳ ರಿಯಾಯಿತಿಯೊಡನೆ 300 (ಮೂರು ನೂರು) ರೂ.ಗಳನ್ನು ಸ್ವೀಕರಿಸಿ, ಅನುಮತಿ ನೀಡಲಾಗುವುದು.
3. ಉಚಿತ ಪ್ರವೇಶ : ಆರ್ಥಿಕವಾಗಿ ಬಹಳ ತೊಂದರೆಯಲ್ಲಿರುವವರಿಗೆ ಉಚಿತವಾಗಿಯೇ ಪ್ರವೇಶವನ್ನು ನೀಡಲಾಗುವುದು. ಅವರು ಮೊದಲೇ ಪತ್ರ ಬರೆದು ಅನುಮತಿಯನ್ನು ಪಡೆಯಬೇಕು. ರಾಷ್ಟ್ರೀಯ ಬಸವ ದಳಗಳವರು ಉತ್ತಮ ಕಾರ್ಯಕರ್ತರನ್ನು ತರಬೇತಿಗೆ ಕಳಿಸಿ, ಅವರ ವೆಚ್ಚವನ್ನು ಭರಿಸುವುದು ಸೂಕ್ತವೆನಿಸುವುದು.

ಸೂಚನೆಗಳು

1. ಶಿಬಿರಾರ್ಥಿಗಳು 2004ರ ಅಕ್ಟೋಬರ್ 2ರ ಸಂಜೆಯೊಳಗೆ ಅಥವಾ 3ನೇ ದಿನಾಂಕದ ಬೆಳಗಿನ 10 ಗಂಟೆಯೊಳಗೆ ಬಂದು ತಲುಪಬೇಕು.
2. ತಮ್ಮೊಡನೆ ಉಡುವ ಬಟ್ಟೆಗಳು, ಯೋಗಾಸನ ಕಲಿಯ ಬಯಸುವ ಶರಣೆಯರು ಚೂಡಿದಾರವನ್ನು, ಹಾಸುವ ಹಾಸಿಗೆ, ಹೊದ್ದಿಕೆ, ಸೊಳ್ಳೆಯ ಪರದೆ, ಊಟದ ತಟ್ಟೆ-ಲೋಟ, ಇಷ್ಟಲಿಂಗ ಪೂಜೆಯ ಸಾಮಗ್ರಿ, ಟಿಪ್ಪಣಿ ಬರೆದುಕೊಳ್ಳಲು ಪುಸ್ತಕವನ್ನು ತಂದಿರಬೇಕು.

ದಾನಿಗಳಲ್ಲಿ ಮತ್ತು ರಾಷ್ಟ್ರೀಯ ಬಸವ ದಳದವರಲ್ಲಿ ಕೋರಿಕೆ : ತ್ಯಾಗ ಮತ್ತು ನಿಸ್ವಾರ್ಥತೆಯಿಂದ ದುಡಿಯುವ ಹಂಬಲವಿರುವ ಕಾರ್ಯಕರ್ತರಿಗೆ ತರಬೇತಿ ನೀಡಿ ಅವರನ್ನು ಪ್ರಚಾರಕರನ್ನಾಗಿ, ಕ್ರಿಯಾಮೂರ್ತಿಗಳನ್ನಾಗಿ ಧಾರ್ಮಿಕ ವಿಧಿವಿಧಾನ ಪೂರೈಸಲು ಬಳಸಿಕೊಳ್ಳುವುದು ಅತ್ಯಗತ್ಯವಾಗಿದೆ. ಅಂಥವರನ್ನು ಆಯ್ಕೆ ಮಾಡಿ, ಅವರ ವೆಚ್ಚ ಭರಿಸಿ ರಾಷ್ಟ್ರೀಯ ಬಸವ ದಳಗಳವರು ಕಳಿಸಿಕೊಟ್ಟು, ತರಬೇತಿ ಕೊಡಿಸುವುದು ತೀರಾ ಆವಶ್ಯಕವಿದೆ. ಸಾಮಾನ್ಯವಾಗಿ ತರಬೇತಿ ಕಮ್ಮಟದಲ್ಲಿ ಉಚಿತವಾಗಿ ಪ್ರವೇಶ ಬಯಸುವವರ ಸಂಖ್ಯೆಯೇ ಜಾಸ್ತಿ ಇರುವುದರಿಂದ ಈ ತರಬೇತಿ ಕಮ್ಮಟ ನಿರ್ವಹಣೆಗೆ ದಾನಿಗಳು ಉದಾರವಾಗಿ ಧನ ಸಹಾಯ ಮಾಡಬೇಕೆಂದು ಕೋರುತ್ತೇವೆ. ಶಿಬಿರ ನಿರ್ವಹಣೆಗೆ, ದಾಸೋಹಕ್ಕೆ ಅಗತ್ಯವೆನಿಸುವ ದೊಡ್ಡ ಪಾತ್ರೆಗಳು, ಊಟದ ತಟ್ಟೆ ಲೋಟ ಮುಂತಾದುವನ್ನಲ್ಲದೆ ಅಕ್ಕಿ, ಜೋಳ, ಗೋಧಿ, ಬೇಳೆ, ಸಕ್ಕರೆ, ಬೆಲ್ಲ ಮೊದಲಾದ ಪಡಿಪದಾರ್ಥಗಳನ್ನು ಶಿಬಿರದ ಅವಧಿಯಲ್ಲಿ ಉಳ್ಳಾಗಡ್ಡೆ, ಸೊಪ್ಪು, ಕಾಯಿಪಲ್ಲೆ ಮುಂತಾದುವನ್ನು ಕೊಡಲಿಕ್ಕೆ ಸದವಕಾಶ ದಾನಿಗಳಿಗಿದೆ.

ಧಾರವಾಡ ನಗರದ ಕಡಪಾ ಮೈದಾನದಲ್ಲಿರುವ ಶ್ರೀ ಮಲ್ಲಿಕಾರ್ಜುನ ಮನಸೂರು ಕಲಾಭವನದಲ್ಲಿ ದಿ. 16-10-2004 ಮತ್ತು ದಿ. 17-10-2004 ರಂದು

ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ

ಕಾಗೆಯೊಂದಗುಳ ಕಂಡಡೆ
ಕೂಗಿ ಕರೆಯದೆ ತನ್ನ ಬಳಗವೆಲ್ಲವ ?
ಕೋಳಿ ಒಂದು ಕುಟುಕ ಕಂಡಡೆ
ಕರೆಯದೆ ತನ್ನ ಕುಲವನೆಲ್ಲವ ?
ಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಗಿಂತ ಕರಕಷ್ಟ ಕಾಣಾ ಲಿಂಗದೇವ !

ಧರ್ಮಪಿತರ ಆಶಯದಂತೆ ಸದ್ಭಕ್ತರು ಆಗಾಗ ಸಮಾವೇಶಗೊಂಡು ಗಣ ಮೇಳಾಪವನ್ನು ನಡೆಸುವುದು ಅತ್ಯಂತ ಅವಶ್ಯವಾಗಿದೆ. ಬಸವ ತತ್ತ್ವ ತರಬೇತಿ ಕಮ್ಮಟದ ಕಡೆಯ 2 ದಿನದಂದು ಭಕ್ತಿಪಕ್ಷ ಸಮ್ಮೇಳನವನ್ನು ನಡೆಸಲಾಗುವುದಲ್ಲದೆ ದಿ. 18-10-2004 ಸೋಮ (ಶಿವ)ವಾರದಂದು ಸುಕ್ಷೇತ್ರ ಉಳಿವೆಯ ಸಂದರ್ಶನವನ್ನು (ಐಚ್ಛಿಕ) ಏರ್ಪಡಿಸಲಾಗುವುದು. ಭಕ್ತಿಪಕ್ಷ ಸಮ್ಮೇಳನವು ದಿ. 16 ಮತ್ತು 17 ರಂದು ಶ್ರೀ ಮಲ್ಲಿಕಾರ್ಜುನ ಮನಸೂರು ಕಲಾಭವನದಲ್ಲಿ ನಡೆಯಲಿದೆ. ದಿ. 16 ರಂದು ಬೆಳಿಗ್ಗೆ 10-30 ರಿಂದ ಒಂದು ಅಧಿವೇಶನ 3-30 ರಿಂದ 5-30 ರವರೆಗೆ ಬಸವ ಧರ್ಮ ಕುರಿತ ರಸ ಪ್ರಶ್ನೆ ಸ್ಪರ್ಧಾ ಕಾರ್ಯಕ್ರಮ, ಸಂಜೆ 6-30 ರಿಂದ 9-00 ರವರೆಗೆ 2ನೆಯ ಅಧಿವೇಶನ ಜರುಗಲಿದೆ. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕುಮಾರಿ ಪ್ರತಿಭಾ ಗರಗದ ಮತ್ತು ತಂಡದವರಿಂದ "ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯಾ" ಎಂಬ ನೃತ್ಯ ರೂಪಕವು ಜರುಗಲಿದೆ. ದಿ. 17-10-2004, ಭಾನುವಾರದಂದು ಬೆಳಿಗ್ಗೆ 10-30 ಗಂಟೆಯಿಂದ ಮೂರನೆಯ ಅಧಿವೇಶನವು ಜರುಗಲಿದೆ. 3-30 ರಿಂದ 5-30ರವರೆಗೆ ಬಸವ

ಭಾವಚಿತ್ರ ಮೆರವಣಿಗೆ ಮತ್ತು ಶರಣ-ಶರಣೆಯರಿಂದ ಪಥ ಸಂಚಲನ. ಧಾರವಾಡ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ. ಶಿಬಿರದ ಅವಧಿಯಲ್ಲಿ ವಚನ ಬರಹ, ವಚನ ಗಾಯನ, ವಚನ ನೃತ್ಯಾಭಿನಯ ಮತ್ತು ಭಾಷಣ ಸ್ಪರ್ಧೆಗಳು ವಿವಿಧ ವಯಸ್ಕರಿಗೆ ನಡೆಯಲಿವೆ. ಸಂಜೆ 6-30 ರಿಂದ 9-00 ರವರೆಗೆ ಸಮಾರೋಪ ಸಮಾರಂಭ ನಡೆಯಲಿದೆ. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆಯುಂಟು. ಲಿಂಗಾಯತ ಧರ್ಮದ ಸಮ್ಮೇಳನದ 4 ಅಧಿವೇಶನಗಳಲ್ಲಿ ಅನೇಕ ವಿದ್ವಾಂಸರು ವಿವಿಧ ವಿಷಯಗಳ ಬಗ್ಗೆ ಚಿಂತನೆ ಮಾಡಲಿರುವರು. ದಿ. 17ರ ರಾತ್ರಿ ತಮ್ಮ ಊರುಗಳಿಗೆ ಹೊರಡಲು ಅನುಮತಿಯುಂಟು. ದಿ. 18 ಮತ್ತು 19 ರಂದು ಉಳಿವೆಯ ಆಕಳ ಗವಿ, ವಿಭೂತಿ, ರುದ್ರಾಕ್ಷಿ ಗವಿ, ದಿ. 19 ರಂದು ಚನ್ನಬಸವ ಮಹಾಮನೆ ಗವಿಯ ಸಂದರ್ಶನ ಏರ್ಪಡಿಸಲಾಗಿದೆ.

ಚಲಿಸುವ ಜ್ಞಾನದೇಗುಲವಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆಯುವ ಈ ತರಬೇತಿ ಕಮ್ಮಟದ ಸದುಪಯೋಗ ಮಾಡಿಕೊಳ್ಳುವಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದೇ ಅಲ್ಲದೆ ಉದಾರವಾಗಿ ದೇಣಿಗೆಯನ್ನು ನೀಡಬೇಕೆಂದು ಕೋರುತ್ತೇವೆ. ಚೆಕ್/ ಬ್ಯಾಂಕ್ ಡ್ರಾಫ್ಟ್ ಮೂಲಕ ಕೊಡುವವರು ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್ ಎಂದು ಬರೆಯಲು ವಿನಂತಿಸುತ್ತೇವೆ. ರಾಷ್ಟ್ರೀಯ ಬಸವ ದಳಗಳ ಪ್ರಮುಖ ಪದಾಧಿಕಾರಿಗಳು ತಪ್ಪದೆ ಆಗಮಿಸಬೇಕೆಂದು ಕೋರುತ್ತೇವೆ.

ಶರಣ. ಸೂರ್ಯಕಾಂತ ಶೀಲವಂತರು,
ಕೋಶಾಧ್ಯಕ್ಷರು
ಶರಣ. ಕರಿಬಸಪ್ಪ ಕೋರಿಶೆಟ್ಟರು,
ಯುವ ಘಟಕದ ಅಧ್ಯಕ್ಷರು

ಶರಣ. ಬಿ.ಜಿ. ಹೊಸಗೌಡರು,
ಕಮ್ಮಟ ನಿರ್ವಹಣಾ ಸಮಿತಿ ಅಧ್ಯಕ್ಷರು
ಶರಣ. ಲಿಂಗರಾಜ ಇಂಗಳಳ್ಳಿ, ಕಾರ್ಯದರ್ಶಿ
ಶರಣ. ಮಹದೇವಪ್ಪ ಮಟ್ಟಿ, ವ್ಯಾಪಾರಸ್ಥರು

ಸಿದ್ಧಾಂತ ಶಿಖಾಮಣಿ - ಒಂದು ವಿಮರ್ಶೆ - ಭಾಗ - 2

- ಮಾತಾಜಿ

ಧರ್ಮಗುರು ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರು ಬರೆದಿರುವ ಕೆಲವು ವಚನಗಳಲ್ಲಿ ಸಂಸ್ಕೃತ ಶ್ಲೋಕಗಳು ಉದ್ಧೃತವಾಗಿರುವುದು ಸರಿಯಷ್ಟೆ. ಅಂಥ ಒಂದು ಶ್ಲೋಕದಲ್ಲಿ ಬರುವ ಒಂದು ಭಾಗ "ಮುಕ್ತಃ ಶಿವ ಸಮೋಭವೇತ್" ಎಂಬುದನ್ನು ಆಧಾರವಾಗಿ ಇಟ್ಟುಕೊಂಡು, ಸಿದ್ಧಾಂತ ಶಿಖಾಮಣಿಯು ಶ್ರೀಕಂಠ ಶಿವಾಚಾರ್ಯನಿಗಿಂತಲೂ ಪೂರ್ವದ್ದು ಎಂಬ ವಾದವನ್ನು ಪ್ರಥಮವಾಗಿ 1942ರಲ್ಲಿ ಶ್ರೀಮುರುಘೇಂದ್ರ ಶಿವಾಚಾರ್ಯರು ಮಂಡಿಸಿದರು. 1948ರಲ್ಲಿ ಕಾಶೀನಾಥ ಶಾಸ್ತ್ರಿಗಳು ಪ್ರಬಲವಾಗಿ ಇದನ್ನು ಅನುಮೋದಿಸಿದರು. ಚನ್ನಬಸವಣ್ಣನವರ ಒಂದು ವಚನದಲ್ಲಿ ಈ ಶ್ಲೋಕವು ಹೀಗೆ ಬಂದಿದೆ.

ಶಿವನ ಭಕ್ತಿಯೇ ಶಿವಾನುಗ್ರಹಕ್ಕೆ ಕಾರಣವಾಗಿರ್ಪುದು ನೋಡಾ।
ಶಿವಾನುಗ್ರಹವೆ ಇಹಪರ ಸುಖಕ್ಕೂ ಪರಮಾನಂದ ಪ್ರಾಪ್ತಿಗೂ

ಕಾರಣವಾಗಿರ್ಪುದು ನೋಡಾ
ಯೋಗೇನ ತು ಪರಾ ಭಕ್ತಿಃ ಪ್ರಸಾದಸ್ತದನಂತರಮ್।
ಪ್ರಸಾದನ್ಮುಚ್ಯತೇ ಜಂತುರ್ಮುಕ್ತಶ್ಶಿವಸವೋ ಭವೇತ್॥
ಎಂದಿಹುದನಾರಯ್ಯದೆ, ಎನ್ನ ನಂಬುಗೆ ಎನ್ನ ಕಟ್ಟುಕ್ರಿಯಾದಿಗಳಿಂದ
ಸರ್ವಸುಖ ಪಡೆವೆನೆಂಬ ಜೀವಭಾವದ ಹಮ್ಮಿನ ಬಿಮ್ಮು ಹತ್ತಿ
ಮುಂದುಗಾಣದ ಮಂದಮತಿಗೆ ಮೆಚ್ಚುವರೆ
ಕೂಡಲಚೆನ್ನಸಂಗಯ್ಯನ ಶರಣರು ?

ಸಿದ್ಧಾಂತ ಶಿಖಾಮಣಿಯಲ್ಲಿ ಈ ಶ್ಲೋಕ ಹೀಗಿದೆ :

ಪ್ರಸನ್ನೇ ಸತಿ ಮುಕ್ತೋऽಭೂತ್ ಮುಕ್ತಃಶಿವಸಮೋ ಭವೇತ್।
ಅಲ್ಪಭಕ್ತ್ಯಾಪಿ ಯೋ ಮರ್ತ್ಯಃ ತಸ್ಯ ಜನ್ಮ ಕ್ರಮಾತ್ ಪರಮ್॥ (ಸಿ.ಶಿ. 9/14)

ಶ್ರೀಕಂಠ ಶಿವಾಚಾರ್ಯನ ಕಾಲ ಕ್ರಿ.ಶ. 1270. ಜ್ಯೋತಿರ್ನಾಥನು 11ನೆಯ ಶತಮಾನದಲ್ಲಿ ರಚಿಸಿದ ಶೈವ ರತ್ನಾಕರದಲ್ಲಿ "ಮುಕ್ತಃ ಶಿವಸಮೋ ಭವೇತ್" ಎಂಬ ಪಾದಾಂಶವಿರುವ ಒಂದು ಶ್ಲೋಕವನ್ನು ಉದಾಹರಿಸಿದ್ದಾನೆ.

ಜ್ಞಾನೇನ ಹಿ ಪರಾ ಭಕ್ತಿಃ ಪ್ರಸಾದಸ್ತದನಂತರಮ್।
ಪ್ರಸಾದಾನ್ಮುಚ್ಯತೇ ಜಂತುಃ ಮುಕ್ತಃ ಶಿವಸಮೋ ಭವೇತ್॥

ಈ ಶ್ಲೋಕಕ್ಕೆ ಮೂಲ ಆಕರ ವೀರತಂತ್ರ ಎಂದು ಜ್ಯೋತಿರ್ನಾಥನು ಹೇಳಿದ್ದಾನೆ. ಚನ್ನಬಸವಣ್ಣನವರ ವಚನದಲ್ಲಿ ಬಂದಿರುವ ಪೂರ್ಣ ಶ್ಲೋಕವು ಬೇರೆಯೇ ಇದ್ದು ಅದರಲ್ಲಿ "ಮುಕ್ತಃ ಶಿವ ಸಮೋ ಭವೇತ್" ಮಾತ್ರ ಇದೆ. ಆದ್ದರಿಂದ ಕೇವಲ ಈ ಅರ್ಧ ವಾಕ್ಯದ ಆಧಾರದ ಮೇಲೆಯೇ ಸಿದ್ಧಾಂತ ಶಿಖಾಮಣಿಯನ್ನು ಬಸವ ಪೂರ್ವದ್ದು ಎನ್ನಲು ಬರದು. ಇಂಥ ವಿಚಾರ ಶಿವಪುರಾಣ, ಆಗಮ, ತಂತ್ರಗಳೆಲ್ಲೆಲ್ಲ ಕಾಣಿಸಿಕೊಂಡಿವೆ. ನೀಲಕಂಠ ಶಿವಾಚಾರ್ಯ ಎಂಬ 1400 ರಲ್ಲಿದ್ದ ವಿದ್ವಾಂಸನು ಈ ಶ್ಲೋಕವು ಶಿವಪುರಾಣದ ವಾಯವೀಯ ಸಂಹಿತೆಯದು ಎಂದಿದ್ದಾನೆ. ಈ ಶ್ಲೋಕವು ವಾತುಲಾಗಮದಲ್ಲೂ ಇದ್ದು ಸಿ.ಶಿ.ಯ ಕರ್ತೃ ಶಿವಯೋಗಿ ಶಿವಾಚಾರ್ಯನೂ ಅಲ್ಲಿಂದಲೇ ತೆಗೆದುಕೊಂಡಿರಬಹುದು.

ವಚನ ವಾಙ್ಮಯ ಮತ್ತು ಸಂಸ್ಕೃತ ಶ್ಲೋಕಗಳು

ಕೆಲವು ಪಂಡಿತರು ಬಸವಾದಿ ಶರಣರ ವಚನ ಸಾಹಿತ್ಯಕ್ಕೆ ಗೌರವ ಕೊಡುವ ಮನಸ್ಸಿಲ್ಲದೆ ವಿಲಕ್ಷಣವಾದ ವಾದಗಳನ್ನು ಹೂಡುವರು.

1. "ಬಸವಣ್ಣನವರು ವೇದಾಗಮ ವಿರೋಧಿಗಳಲ್ಲ; ವೇದ, ಗೀತೆ, ಉಪನಿಷತ್ ಮುಂತಾದವು ಹೇಳಿದ್ದನ್ನೇ ಶರಣರು ಕನ್ನಡದಲ್ಲಿ ಸುಂದರವಾಗಿ ಹೇಳಿದ್ದಾರೆ". ಹೇಗೆ ಯಾವ ಮನುಷ್ಯನೂ ನೂರಕ್ಕೆ ನೂರು ಕೆಟ್ಟವನಲ್ಲವೋ ಹಾಗೆ ಶಾಸ್ತ್ರಗಳೂ ಸಹಿತ. ಬಸವಾದಿ ಶರಣರು ವೇದ, ಆಗಮ, ಗೀತೆ ಮುಂತಾದವು ಒಳ್ಳೆಯದನ್ನು ಹೇಳಿದ್ದಾರೆ. ಆ ವಿಚಾರಧಾರೆ ತಮಗೆ ಸಮ್ಮತವೆನಿಸಿದರೆ ಅದನ್ನು

ಮೆಚ್ಚುಗೆಯಿಂದಲೇ ಉದಾಹರಿಸುತ್ತಾರೆ.

1. ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ
ದೇವನೊಬ್ಬನೇ ಕಾಣಿರೊ ಇಬ್ಬರೆಂಬುದು ಹುಸಿ ನೋಡಾ.
ಲಿಂಗ (ಕೂಡಲಸಂಗಮ) ದೇವನಲ್ಲದೆ ಇಲ್ಲವೆಂದಿತ್ತು ವೇದ.

ವೇದಗಳ ಹೆಸರು ಹೇಳಿಕೊಂಡು ಬಹುದೇವತೋಪಾಸನೆ ಮಾಡುವವರಿಗೆ ಬಸವಣ್ಣನವರು ಹೇಳುತ್ತಾರೆ, "ವೇದಗಳು ಸಹ ಒಬ್ಬನೇ ದೇವನನ್ನು ಮನ್ನಿಸುತ್ತವೆ" ಎಂದು.

2. ಇನ್ನೊಂದು ವಚನದಲ್ಲಿ ಹೇಳುತ್ತಾರೆ, "ವೇದವೆಂಬುದು ನಿಮಗೆ ತಿಳಿಯದು" ಎಂದು.

3. ಅದೇ ರೀತಿ ಆಗಮಗಳಲ್ಲಿ ಒಳ್ಳೆಯ ವಿಚಾರಗಳನ್ನು ಮೆಚ್ಚಿ ಉದಾಹರಿಸಿದರೂ ಅವು ಜನ್ಮದಿಂದಲೇ ನಿರ್ಧರಿಸುವ ಜಾತಿವಾದಕ್ಕೆ ಪ್ರೋತ್ಸಾಹ ಕೊಟ್ಟಾಗ ಅವನ್ನು ಜರಿಯುತ್ತಾರೆ.

ನಾಲಿಗೆ ತಾಗಿದ ರುಚಿಗೆ ಮನವೇ ಸಾಕ್ಷಿ
ಮಾಲೆಗಾರನ ಕೇಳಿ ನೆನೆ ಅರಳುವುದೆ ?
ಆಗಮವನಿದಿರಿಂಗೆ ತೋರುವುದು ಆಚಾರವೆ ?
ಕೂಡಲ ಸಂಗಯ್ಯನು ಮಾದಾರ ಚೆನ್ನಯ್ಯನ
ಮನೆಯಲ್ಲಿ ಉಂಡ ಕಾರಣ.

ಜಾತೀಯತೆಯನ್ನು, ಕರ್ಮಕಾಂಡವನ್ನು, ಹಿಂಸೆಯನ್ನು ವೇದಗಳು ಪ್ರತಿಪಾದಿಸಿದಾಗ ಅದನ್ನು ಕಟುವಾಗಿ ಟೀಕಿಸುತ್ತಾರೆ

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ ಅಳು ಕಂಡಾ!
ವೇದವನೋದಿದವರ ಮುಂದೆ ಅಳು ಕಂಡಾ!
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ!
ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಲಿಂಗದೇವ. ಬ.ವ.ದೀ-571

"ವೇದವನೋದುವವರ ಮುಂದೆ ಅಳು ಕಂಡಾ" ಎನ್ನುವಾಗ ವೇದದ ಶ್ಲೋಕಗಳನ್ನು ಉಚ್ಚರಿಸುತ್ತ ಹೋತವನ್ನು ಕೊಲ್ಲುವ ಬಗ್ಗೆ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ.

ಕೆಲವೊಂದು ಒಳ್ಳೆಯ ಮಾತನ್ನು, ತಮ್ಮ ವಿಚಾರಕ್ಕೆ ಸಹಮತ ಇರುವ ಆಲೋಚನೆಗಳನ್ನು ಉಕ್ತಿ Quotations ತರಹ ಬಳಸಿಕೊಂಡಿದ್ದಾರೆ.

1. ಜಾತಸ್ಯ ಮರಣಂ ಧ್ರುವಂ
2. ಏಕೋ ದೇವ ರುದ್ರನದ್ವಿತೀಯ ಕಾಣಿರಯ್ಯ (ಶ್ರುತಿಗಗಮ್ಯ ಎಂಬ ವಚನ)
3. ಸಪ್ತಧಾತು ಸಮಂಪಿಂಡಂ ಸಮಯೋನಿ ಸಮುದ್ಭವಂ
   ಭರ್ಗೋ ದೇವಸ್ಯ ಧೀಮಹಿ (ಉಪ್ಪರಗುಡಿ) ಎಂಬ ವಚನ
4. ಆತ್ಮ ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ?

ಇದರರ್ಥ ವೈದಿಕ ವಿಚಾರಧಾರೆ ಪ್ರತಿಪಾದಿಸುವ ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆ ಹೋಮ-ಹವನ-ಯಜ್ಞಾದಿ ಕರ್ಮಕಾಂಡ, ಸಾಮಾಜಿಕ-ಧಾರ್ಮಿಕ ಅಸಮಾನತೆ, ಪಂಚಸೂತಕ ಪಂಚಾಂಗ, ಜ್ಯೋತಿಷ್ಯ ಮುಂತಾದ ಎಲ್ಲವನ್ನೂ ಖಂಡಿಸಿದ್ದಾರೆ, ವಿರೋಧಿಸಿದ್ದಾರೆ.

ಕೆಲವೊಂದು ಸಂಸ್ಕೃತ ಶ್ಲೋಕಗಳಂತೂ ವಚನಗಳಲ್ಲಿ ಅಂತರ್ಗತವಾಗಿರುವ ಭಾವಕ್ಕೆ ಹೊಂದುವುದೇ ಇಲ್ಲ.

1. ದಂಡ ಕ್ಷೀರ ದ್ವಯಂ ಹಸ್ತ। ಜಂಗಮಂ ಭಕ್ತಿಮಂದಿರಂ
ಅತಿ ಭಕ್ತಿ ಲಿಂಗ ಸಂತುಷ್ಟಂ। ಅಪಹಾಸ್ಯಂ ಯಮದಂಡನಂ॥
(ಎಡದ ಕೈಯಲು ಎಂಬ ವಚನ 389)

2. ಯೋ ಲಿಂಗಮರ್ಧರಾತ್ರೌ. ತು ಶುಚಿರ್ಭೂತ್ವಾ ಪ್ರಪೂಜಯೇತ್
ಅಗ್ನಿಷ್ಟೋಮ ಸಹಸ್ರಸ್ಯ ಧರ್ಮಸ್ಯ ಲಭ್ಯತೇ ಫಲಂ
(ಗಾಂಧಾರಿ ಎಂಬ ವಚನ ಬ.ವ.ದೀ. 1031)

3. ವೇದಾದಿ ನಾಮ ನಿರ್ನಾಮಂ। ಮಹತ್ವಂ ಮಹದೀಶ್ವರಂ
ಗುರೂಕ್ತ ಮಂತ್ರ ಮಾರ್ಗೇಣ। ಇಷ್ಟಲಿಂಗಂ ತುಶಾಂಕರಿ॥ ಎಂದುದಾಗಿ
ವಚನ ಪಾತಕವೆನ್ನ ವಚನ ದೋಷಂಗಳೆನ್ನ
ಕಾಡಿಕಾಡಿ ಕೆಡಿಸಿಹವೆನ್ನ ಲಿಂಗದೇವಾ
ಅಹಂ ಎಂಬ ಅಹಂಕಾರವೆನ್ನ! ಭ.ಬ.ವ. 252

4. ದೀರ್ಘ ದಂಡ ನಮಸ್ಕಾರಂ। ನಿರ್ಲಜ್ಜಂ ಗುರು ಸನ್ನಿಧೌ
ಶರೀರ ಮರ್ಥಂ ಪ್ರಾಣಂ ಚ। ಸದ್ಗುರು ಭ್ಯೋ ನಿವೇದಯೇತ್॥
(ಮನ ಮುಟ್ಟಿದ)

ಇಂತಹ ಅನೇಕ ಉಲ್ಲೇಖಗಳು ಇನ್ನೂ ಇವೆ.

ಮೊದಲನೆಯ ವಚನ 389 ರಲ್ಲಿ ದೇವರು ಹೇಗೆ ವ್ಯಕ್ತಾವ್ಯಕ್ತನು ಎಂಬುದನ್ಹೇಳಿ ದೇವನನ್ನು ತಂದೆ (ಅಥವಾ ತಾಯಿಗೆ) ಹೋಲಿಸುತ್ತಾರೆ. ತಂದೆಯು ಮಗುವನ್ನು ಪ್ರೀತಿಸುವಂತೆಯೇ ಬೆತ್ತ ಹಿಡಿದು ದಂಡಿಸುವನೂ ಕೂಡ. ಮಗುವು ಚೆನ್ನಾಗಿ ಬೆಳೆಯಲು ಪ್ರೀತಿ ಎಷ್ಟು ಅಗತ್ಯವೋ ಅವನಲ್ಲಿ ಶಿಸ್ತು ಬರಲು ದಂಡನೆಯೂ ಅವಶ್ಯ. ಅದೇ ಗುಣ ದೇವನಲ್ಲಿ ಸಹ ಇದೆ. ಸಂಸ್ಕೃತ ಶ್ಲೋಕದಲ್ಲಿ ಈ ಹೋಲಿಕೆ ಜಂಗಮನಿಗೆ ಕೊಡಲ್ಪಟ್ಟಿದೆ. ಮತ್ತು ಜಂಗಮನನ್ನು ಗೌರವಿಸಿದರೆ ದೇವರು (ಲಿಂಗ) ಸಂತುಷ್ಟನಾಗುತ್ತಾನೆ. ಒಂದು ವೇಳೆ ಅವಮಾನಗೊಳಿಸಿದರೆ, ಅಪಹಾಸ್ಯ ಮಾಡಿದರೆ ಯಮದಂಡನೆಗೆ ಒಳಗಾಗಬೇಕು. ಈ ವಿಚಾರ ಜಂಗಮದ ಮಹತಿ ಹೇಳುವಾಗ ಸರಿ ಇರಬಹುದಾದರೂ, ಈ ವಚನದ ಭಾವ ದೇವರ ಸ್ವರೂಪ ಚಿತ್ರಿಸುವುದಾಗಿರುವುದರಿಂದ ಸಂಸ್ಕೃತ ಶ್ಲೋಕವು ಕೃತಕವಾಗಿ ತುರುಕಲ್ಪಟ್ಟಿದೆ. ಈ ಸಂಸ್ಕೃತ ಶ್ಲೋಕವನ್ನು ತೆಗೆದು ಹಾಕಿದರೆ ಯಾವುದೇ ರೀತಿ ಅರ್ಥಕ್ಕೆ ಚ್ಯುತಿ ಬರುವುದಿಲ್ಲವಷ್ಟೇ ಅಲ್ಲ ವಚನದ ಓಟವು ಸರಾಗವಾಗುವುದು ಎಂಬುದನ್ನು ಗಮನಿಸಬಹುದು.

ಮುಂದಿನ ಉಲ್ಲೇಖ 1031ನೆಯ ವಚನದೊಳಗೆ ಸೇರಿಸಲ್ಪಟ್ಟ ಶ್ಲೋಕ. ಬೆಳಗಿನ ವೇಳೆಯಲ್ಲಿಯೇ ಇಷ್ಟಲಿಂಗಪೂಜೆಯನ್ನು ಮಾಡಬೇಕು ಎಂದು ಹೇಳುವ ಬಸವಣ್ಣನವರು ಸಮಯ ನಿರ್ದಿಷ್ಟತೆಗೆ ಕೆಲವು ಸೂಚನೆ ಕೊಡುತ್ತಾರೆ. "ಅರ್ಧರಾತ್ರಿಯಲ್ಲಿಯೇ ಸ್ನಾನದಿಂದ ಶುಚಿರ್ಭೂತನಾಗಿ ಭಕ್ತನು ಲಿಂಗಪೂಜೆ ಮಾಡಬೇಕು. ಇದರಿಂದ ಒಂದು ಸಾವಿರ ಅಗ್ನಿಷ್ಟೋಮ (ಒಂದು ವಿಶಿಷ್ಟ ಬಗೆಯ ಹೋಮ) ಮಾಡಿದ ಪುಣ್ಯ ಪ್ರಾಪ್ತಿಯಾಗುತ್ತದೆ" ಎಂಬ ಹೋಲಿಕೆ ಬಸವಣ್ಣನವರು ಕೊಡಲು ಸಾಧ್ಯವೆ ? ಹೋಮ-ಹವನ, ಯಜ್ಞ-ಯಾಗಗಳ ಕಟ್ಟಾ ವಿರೋಧಿಯಾದ ಅವರು ಅಗ್ನಿದೇವರಲ್ಲ, ಅಗ್ನಿಯ ಮೂಲಕ ಸುಡುವುದು ವ್ಯರ್ಥ ಅಪವ್ಯಯ ಎನ್ನುತ್ತಾರೆ. ಈ ಶ್ಲೋಕವು ಹೊರಗಿನಿಂದ ತುರುಕಲ್ಪಟ್ಟಿದ್ದು ಎನ್ನುವುದರಲ್ಲಿ ಸಂದೇಹವಿಲ್ಲ. ಮೂರನೆಯ ಉಲ್ಲೇಖದ "ವೇದಾದಿ ನಾಮ" ಎಂಬ ವಚನ (252) ದಲ್ಲಿ ಒಂದು ಶ್ಲೋಕವಿದೆ. ಅದರಲ್ಲಿ ಗುರುವಿನಿಂದ ದೊರೆತ ಇಷ್ಟಲಿಂಗದ ಮಹತಿ ವಿವರಣೆಗೊಂಡಿದೆ. ಆದರೆ ವಚನದಲ್ಲಿ ಇರುವ ಭಾವವೇ ಬೇರೆ. ಭಕ್ತನು ಎಷ್ಟೇ ಎಚ್ಚರಿಕೆಯಿಂದ ಇದ್ದರೂ ಮಾತಿನಲ್ಲಿ ಅನಿಯಂತ್ರಿತವಾಗಿ ಕೆಲವು ತಪ್ಪುಗಳಾಗುತ್ತವೆ. ಅದರಿಂದ ಮತ್ತೊಬ್ಬರಿಗೆ ನೋವಾಗಿ ಪಾಪವು ಒದಗುವ ಸಂಭವವಿರುತ್ತದೆ. ಈ ತಪ್ಪಿಗೆ ಕಾರಣವೇನೆಂದರೆ ಅಹಂ ಭಾವ ಎಂದು ಆತ್ಮಲೋಕನ ಮಾಡಿಕೊಳ್ಳುವ ಈ ವಚನದಲ್ಲಿ ವೇದ, ಗುರು, ಇಷ್ಟಲಿಂಗದ ಉಲ್ಲೇಖಗಳಿಗೆ ಅವಕಾಶವೇ ಇಲ್ಲ. ಆದರೂ ಕೃತಕವಾಗಿ ಸೇರಿಸಲಾಗಿದೆ. ನಾಲ್ಕನೆಯ ಉಲ್ಲೇಖದ ವಚನ (ಬ.ವ.ದೀ 1055) ಮನ ಮುಟ್ಟಿ ಭಕ್ತಿಗೆ ಎಂಬುದಾಗಿದೆ. ತನು-ಮನ ಎರಡೂ ನಿಕಟ ಸಂಬಂಧ ಹೊಂದಿವೆ. "ಮನಸ್ಸಿನಲ್ಲಿ ಭಕ್ತಿ ಇದ್ದರೆ ಅದು ತನುವಿನ ಕ್ರಿಯೆಗಳ ಮೂಲಕ ಪ್ರಕಟವಾಗಬೇಕು. ತನುವಿನಿಂದ ಅರ್ಚನಾದಿ ಕಾರ್ಯ ಮಾಡುತ್ತಿದ್ದರೆ ಅದು ಮನಸ್ಸಿನಲ್ಲಿ ವಿಕಾಸವನ್ನು, ಪರಿಪಕ್ವತೆಯನ್ನು ತರಬೇಕು. ನಿನಗೆ (ಪರಮಾತ್ಮನಿಗೆ) ನನ್ನ ತನುಮನ ಎರಡೂ ಅರ್ಪಿತವಾಗಿವೆ ಎಂಬುದನ್ನು ನೀನು ಬಲ್ಲೆ" ಎಂದು ದೇವನ ಮುಂದೆ ಬಸವಣ್ಣನವರು ಮನಸ್ಸನ್ನು ತೆರೆದಿಡುತ್ತಿದ್ದಾರೆ. ಇಲ್ಲಿ ಗುರುವಿನ ಪಾತ್ರವೇ ಇಲ್ಲ. "ಗುರುವಿನ ಸನ್ನಿಧಿಯಲ್ಲಿ ದೀರ್ಘದಂಡ ನಮಸ್ಕಾರ ಮಾಡಲು ನಾಚಿಕೆ ಪಡಬಾರದು. ಶರೀರ, ಧನ ಮತ್ತು ಪ್ರಾಣ ಮೂರನ್ನು ಸದ್ಗುರುವಿಗೆ ಸಮರ್ಪಿಸಬೇಕು" ಎಂಬ ಶ್ಲೋಕ ಈ ವಚನದ ಭಾವಕ್ಕೆ ಸರಿ ಹೊಂದದು. ಈ ರೀತಿ ಕೃತ್ರಿಮವಾಗಿ ಸಂಸ್ಕೃತ ಶ್ಲೋಕಗಳನ್ನು ವಚನಗಳಲ್ಲಿ ತೂರಿಸುವುದರಲ್ಲಿ ದುರುದ್ದೇಶ ಮತ್ತು ವಿಶಿಷ್ಟ ಉದ್ದೇಶವನ್ನು ಗಮನಿಸಬಹುದು.

1. ವಚನಕಾರರು ಏನನ್ನೂ ಹೊಸದನ್ನು ಹೇಳಿಲ್ಲ. ಅವರು ಮಾಡಿರುವುದು ಕೇವಲ ಅನುವಾದಕರ ಕೆಲಸ ಮಾತ್ರ. ಸಂಸ್ಕೃತದಲ್ಲಿ ಇದ್ದುದನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ವಚನಕಾರರ ಕ್ರಾಂತಿಕಾರಕ ವಿಚಾರಗಳೆಲ್ಲವೂ ಮೊದಲೇ ವೇದಾಗಮ, ಗೀತೆ ಮುಂತಾದ ಶಾಸ್ತ್ರಗಳಲ್ಲೇ ಇದ್ದವು ಎಂಬುದನ್ನು ಸಾಧಿಸುವುದೇ ಈ ಕೃತ್ಯದ ಹಿಂದಿನ ಉದ್ದೇಶ.

ಒಬ್ಬರು ಒಂದು ಸುಳ್ಳನ್ನು ಹೆಣೆದು ಮುದ್ರಣ ಮಾಡಿದರೆ, ಅದನ್ನು ಇನ್ನೊಬ್ಬರು ಪರಾಮರ್ಶಿಸದೆ ಅಥವಾ (ದುರ್) ಉದ್ದೇಶ ಪೂರ್ವಕವಾಗಿ ಆ ವಿಚಾರವನ್ನು ತಮ್ಮ ಸಾಹಿತ್ಯದಲ್ಲಿ ಪ್ರಕಟಿಸುವರು. ಇದನ್ನು ಉಲ್ಲೇಖಿಸಿ ಮತ್ತೊಬ್ಬರು, ಹೀಗೆ ಮಾಡಿ ಮಾಡಿ ಲಿಂಗೋದ್ಭವ ಪಂಚಾಚಾರ್ಯರ ಕಥೆಯನ್ನು, ಅವರು

ಬಸವ ಪೂರ್ವದವರೆಂದು, ಸಿದ್ಧಾಂತ ಶಿಖಾಮಣಿ ಬಸವ ಪೂರ್ವದ ಗ್ರಂಥವೆಂದು ಜನರಲ್ಲಿ ನಂಬಿಕೆ ಹುಟ್ಟಿಸಿಬಿಟ್ಟು ಲಿಂಗಾಯತ ಸಮಾಜವನ್ನು ಗೊಂದಲಮಯವಾಗಿ ಮಾಡಿಬಿಟ್ಟರು. ಮೊದಲೇ ಹೆಚ್ಚಿನ ಸಂಖ್ಯೆಯ ಲಿಂಗಾಯತರು ಓದುವ ಅಭ್ಯಾಸದವರಲ್ಲ! ಇಂಥ ಕೃತ್ರಿಮ ಕೆಲಸದಲ್ಲಿ ವೀರಶೈವವಾದಿ ಪುರೋಹಿತ ಶಾಹಿಗಳು ಬಲು ಮುಂದು.

ನಮ್ಮ ದೇಶದಲ್ಲಿ ಅಪ್ರಾಮಾಣಿಕತೆ ರಕ್ತದಲ್ಲೇ ಹರಿದು ಬರುವಂತೆ ಕಾಣುತ್ತದೆ. ವಿಮರ್ಶೆಗೆ ಒಳಪಡಿಸಿ ಸತ್ಯವೆಂದು ಕಂಡುದನ್ನು ನಂಬಬೇಕು ಎನ್ನುವುದಕ್ಕಿಂತಲೂ ಹುಟ್ಟಿದ ಜಾತಿಯ ಸತ್ಯ ನಿರ್ಣಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಗುರು ಬಸವಣ್ಣನವರಂತೆ ತನ್ನ ಕುಲ-ಸಂಪ್ರದಾಯಗಳಲ್ಲಿದ್ದ ಅಸತ್ಯ-ಅನ್ಯಾಯ-ಶೋಷಣೆಗಳನ್ನು ವಿರೋಧಿಸಿದವರು ಸಿಕ್ಕುವುದು ಅಪರೂಪ. ವಿರಕ್ತ ಮಠಗಳ ಪ್ರಭಾವ ಅಥವಾ ಅನ್ನದ ಋಣದಲ್ಲಿ ಬೆಳೆದ ಅನೇಕ ಅಯ್ಯನವರ ವರ್ಗದ ವಿದ್ವಾಂಸರು ಪ್ರಾಮಾಣಿಕವಾಗಿ ವಚನ ಸಾಹಿತ್ಯ ಕುರಿತು ಬರೆಯುತ್ತಿದ್ದವರು, ಬರುಬರುತ್ತ ''ಜಾತಿ ಜಂಗಮತ್ವ'' ಹೆಡೆ ಎತ್ತಿ ಸಾಹಿತ್ಯಿಕ ಅಪ್ರಾಮಾಣಿಕತೆಗೆ ಬಲಿಯಾಗಿರುವುದನ್ನು ಕಂಡಾಗ ಆಶ್ಚರ್ಯವೆನಿಸುತ್ತದೆ. ಲಿಂ ॥ ಡಾ॥ ಜ.ಚ.ನಿಯವರು, ಡಾ॥ ಆರ್.ಸಿ. ಹಿರೇಮಠ, ಡಾ॥ ಭೂಸನೂರು ಮಠ, ಡಾ॥ ತಿಪ್ಪೇರುದ್ರ ಸ್ವಾಮಿಗಳು ಮುಂತಾದವರು ಇದಕ್ಕೆ ಉದಾಹರಣೆ. ಅಯ್ಯನವರು ಅಲ್ಲದಿದ್ದರೂ ಬಸವ ಪೂರ್ವದ್ದು ತಮ್ಮ ಸಂಪ್ರದಾಯ ಎಂದು ಸಾಧಿಸ ಬಯಸುವ ಸುತ್ತೂರು ಶ್ರೀಗಳು, ಅವರ ಕೃಪಾಪೋಷಿತರಾದ ಗೊ.ರು. ಚನ್ನಬಸಪ್ಪ ಮುಂತಾದವರು ಸಹ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡುವವರು. ಡಾ॥ ಇಮ್ಮಡಿ ಶಿವಬಸವ ಸ್ವಾಮಿಗಳು ತಮ್ಮ ಗ್ರಂಥದಲ್ಲಿ ಡಾ॥ ಆರ್.ಸಿ. ಹಿರೇಮಠರ ''ಮಹಾಯಾತ್ರೆ'' ವಿಮರ್ಶೆ ಮಾಡುತ್ತ ಹೋಗಿರುವ ಮಾತಲ್ಲಿ ಈ ಅಪ್ರಾಮಾಣಿಕತೆ ಗುರುತಿಸಬಹುದು. ಆರ್.ಸಿ. ಹಿರೇಮಠರು ಮಹಾಯಾತ್ರೆ.ಎಂಬ ಗ್ರಂಥದಲ್ಲಿ ಬಸವಣ್ಣನವರ ಷಟ್‌ಸ್ಥಲ ವಚನ ಸಂಖ್ಯೆ 505ರಲ್ಲಿ ಸಿದ್ಧಾಂತ ಶಿಖಾಮಣಿಯ ಶ್ಲೋಕ ಬಂದಿರುವುದು ಗಮನಾರ್ಹ ಎಂದಿದ್ದಾರೆ. ಶ್ರೀ ಸಂ.ಶಿ. ಭೂಸನೂರಮಠರು ಡಾ॥ ಆರ್.ಸಿ. ಹಿರೇಮಠ, ಡಾ॥ ಚಿದಾನಂದ ಮೂರ್ತಿಯವರಂತೆ ಯಾಂತ್ರಿಕ ಒಣ ಸಂಶೋಧಕ ವಿದ್ವಾಂಸರಾಗದೆ ಸ್ವಭಾವತಃ ಭಾವಜೀವಿ ಸಾಧಕರು. ಅಂಥವರು ವೀರಶೈವ ಸಿದ್ಧಾಂತ ಶಿಖಾಮಣಿಗೆ ತಪ್ಪುತಪ್ಪು ವ್ಯಾಖ್ಯಾನವನ್ನು ಬರೆದಿರುವುದನ್ನು ನೋಡಿದಾಗ ನನಗೆ ದಿಗ್ಭ್ರಾಂತಿಯಾಗಿರುವುದಷ್ಟೇ ಅಲ್ಲ ''ಜಾತಿ ವಾಸನೆ ಎಷ್ಟು ಕೆಟ್ಟದ್ದು ಅದು ವಿಷ ಸರ್ಪದಂತೆ ಯಾವಾಗ ಬೇಕಾದರೂ ಹೆಡೆ ಎತ್ತಬಹುದು.'' ಎನ್ನಿಸುತ್ತಲಿದೆ. 1992ರಲ್ಲಿ ಪ್ರಕಟವಾಗಿರುವ ಕರಿಬಸವ ಶಾಸ್ತ್ರಿಗಳ ಟೀಕೆ ಒಳಗೊಂಡ ವೀರಶೈವ ಸಿದ್ಧಾಂತ-ಶಿಖಾಮಣಿ ನೋಡಿ ನನಗೆ ಈ ಅಭಿಪ್ರಾಯ ಮೂಡಿದೆ. ಆದರೆ ಈ ವ್ಯಾಖ್ಯಾನದಲ್ಲಿ ಭೂಸನೂರು ಮಠರ ಪಾತ್ರವೇನು, ಡಾ॥ ಎಸ್.ಜಿ. ಛಿವಾರಿಯವರ ಪಾತ್ರವೇನು ಎಂಬುದನ್ನು ತಿಳಿಯುವುದು ಅಗತ್ಯವಿದೆ. ಏಕೆಂದರೆ ಕೃತ್ರಿಮ ಸೃಷ್ಟಿಯಲ್ಲಿ ಧೂರ್ತ ಪುರೋಹಿತ ಶಾಹಿಗಳ ಜೊತೆಗೆ ಮೂಢ ಭಕ್ತವರ್ಗವೂ ಕೈಜೋಡಿಸುವುದು ಅತ್ಯಂತ ಸ್ವಾಭಾವಿಕ.

ಒಮ್ಮೆ ಓರ್ವ ಬ್ರಾಹ್ಮಣ ಸಮುದ್ರ ಸ್ನಾನಕ್ಕೆ ಹೋದ. ಕೈಯಲ್ಲಿ ಬೆಲೆ ಬಾಳುವ ತಾಮ್ರದ ತಂಬಿಗೆ ಇತ್ತು. ಅದನ್ನು ದಂಡೆಯ ಮೇಲೆ ಇಟ್ಟು ಹೋದರೆ ಯಾರಾದರೂ ಕದಿಯಬಹುದು ಎಂದು ಒಂದು

ಉಪಾಯ ಹುಡುಕಿದ. ಮರಳಲ್ಲಿ ಒಂದು ತಗ್ಗು ತೋಡಿ, ತಂಬಿಗೆ ಮುಚ್ಚಿಟ್ಟು ಮೇಲೆ ಮರಳಿನಿಂದ ಲಿಂಗಾಕೃತಿಯನ್ನು ಮಾಡಿದ. ನಂತರ ನಿಶ್ಚಿಂತೆಯಿಂದ ಸಮುದ್ರದೊಳಕ್ಕೆ ಸ್ನಾನಕ್ಕೆ ಸಾಗಿದ. ಸ್ನಾನ ಮುಗಿಸಿ ಹೊರಬಂದಾಗ ಅಂಥ ನೂರಾರು ಮರಳಗುಡ್ಡೆಗಳು ತಲೆ ಎತ್ತಿದ್ದವು. ತಾನು ತಂಬಿಗೆ ಇಟ್ಟ ಸ್ಥಳ ಗುರುತಿಸಲು ಆಗಲೇ ಇಲ್ಲ. ಏಕೆಂದರೆ ನಂತರ ಬಂದ ಯಾತ್ರಿಕರು ಸ್ನಾನಕ್ಕೆ ಹೋಗುವ ಮುನ್ನ ಲಿಂಗಪ್ರತಿಷ್ಠೆ ಮಾಡಬೇಕೇನೋ ಎಂದುಕೊಂಡು ಎಲ್ಲರೂ ಒಂದೊಂದು ಮರಳಿನ ಗುಡ್ಡೆ ಮಾಡುತ್ತಾ ಹೋಗಿದ್ದರು. ಹೀಗಾಗಿ ತಾನು ಮಾಡಿದ್ದು ಯಾವುದು ಎಂಬುದು ಆ ಬ್ರಾಹ್ಮಣ ಯಾತ್ರಿಕನಿಗೆ ಗುರುತಿಸಲಾಗಲಿಲ್ಲ. ಹಾಗೆ ರೇಣುಕಾದಿ ಪಂಚಾಚಾರ್ಯರು ಯುಗಯುಗಗಳಲ್ಲಿ ಅವತರಿಸಿದ್ದರು, ಸಿದ್ಧಾಂತ ಶಿಖಾಮಣಿ ಬಸವ ಪೂರ್ವದ್ದು ಮುಂತಾದ ಮಿಥ್ಯಾವಾದಗಳನ್ನು ಕಾಶೀನಾಥ ಶಾಸ್ತ್ರಿ ಹುಟ್ಟುಹಾಕಿ, ಚಾಲನೆ ಮಾಡಿ ಬಿಟ್ಟರು. ಈ ಕಥೆಗಳನ್ನು ಜ.ಚ.ನಿ. ಪಂಚಪೀಠಾಧೀಶರು, ಅವರ ಶಾಖಾ ಮಠದವರು, ಅಯ್ಯನವರ ಪಂಗಡದ ವಿದ್ವಾಂಸರು ಅವರನ್ನು ಉದಾಹರಿಸಿ ಇವರು, ಇವರನ್ನು ಉದಾಹರಿಸಿ ಅವರು ಬರೆದು, ಒಟ್ಟು ಸತ್ಯ ಸಂಗತಿ ಮುಚ್ಚಿಹಾಕಲು ಪ್ರಯತ್ನಿಸುತ್ತಿದ್ದಾರೆ. ಲಿಂಗಾಯತ ಧರ್ಮಕ್ಕೆ ಯಾವುದೇ ರೀತಿ ಸಂಬಂಧಿಸಿರದ ಸಿದ್ಧಾಂತ ಶಿಖಾಮಣಿ (ಮುಂದೆ ವಿವರಗಳನ್ನು ನೀಡಲಿದ್ದೇನೆ) ಕ್ರಿಯಾಸಾರ, ಶ್ರೀಕರ ಭಾಷ್ಯ ಮುಂತಾದ ಗುಮ್ಮಗಳನ್ನು ಬಿಟ್ಟು ಮಿಥ್ಯ ನಂಬಿಕೆಗಳನ್ನು ಬಲಪಡಿಸುತ್ತಿದ್ದಾರೆ.

ಡಾ॥ ಚಿದಾನಂದ ಮೂರ್ತಿಯವರ ಅಪ್ರಾಮಾಣಿಕತೆಗೆ ಒಂದು ಉದಾಹರಣೆ ನೋಡಿರಿ. ಪ್ರಸಾದಾದೇ...ಈ ಶ್ಲೋಕವು ಬಸವಣ್ಣನವರ 506ನೆಯ ವಚನದಲ್ಲಿರುವುದು ''ವಾತುಲಾಗಮದ್ದಾದರೆ ಬಸವ(ಣ್ಣನವರು) ಅಲ್ಲಿಂದ ತೆಗೆದುಕೊಂಡಿರುವ ಸಾಧ್ಯತೆ ಇದೆ.'' ಎಂದು ವಚನ ಶೋಧ ಎಂಬ ಗ್ರಂಥದಲ್ಲಿ ಹೇಳಿದ್ದಾರೆ. ಈ ಸಂಪ್ರಬಂಧದ ಒಟ್ಟು ನಿರ್ಣಯಗಳನ್ನು ಹೀಗೆ ಸಂಗ್ರಹಿಸಬಹುದು ಎಂದು ಹೇಳಿ, ''ಸಿದ್ಧಾಂತ ಶಿಖಾಮಣಿಯ ಕಾಲ ಕ್ರಿ.ಶ. 1160-80 ಕ್ಕಿಂತ ನಿಶ್ಚಿತವಾಗಿಯೂ ಹಿಂದೆಯಲ್ಲ, ಬಹುಶಃ 13-14ನೇ ಶತಮಾನದ ಕೃತಿ'' ಎಂದು ಘೋಷಿಸಿದ್ದಾರೆ ಎಂದು ಮೊದಲು ಬರೆದ ಡಾ॥ ಚಿ.ಮೂ ನಂತರ ಬರೆದ ''ವೀರಶೈವ ಧರ್ಮ ಭಾರತೀಯ ಸಂಸ್ಕೃತಿ'' ಎಂಬ ಗ್ರಂಥದಲ್ಲಿ, '' ಆ ಕೃತಿಯಿಂದ (ಸಿ.ಶಿ) ಒಂದು ಶ್ಲೋಕವನ್ನು ಬಸವಣ್ಣನವರು ಉದಾಹರಿಸಿರುವುದರಿಂದ ಆ ಕೃತಿ ಬಸವನಿಗಿಂತ ಪ್ರಾಚೀನವೆಂಬುದರಲ್ಲಿ ಅನುಮಾನವಿಲ್ಲ. ಆ ವಚನದಲ್ಲಿ (ಸಂ-1 ವಚನ 506) ಬರುವ 'ಪ್ರಸಾದಾತ್...'ಎಂಬ ಶ್ಲೋಕವು ಸಿದ್ಧಾಂತಶಿಖಾಮಣಿಯಲ್ಲಿ ಈಗ ಲಭ್ಯವಿರುವ ಪಾಠದಲ್ಲೂ ದೊರಕುತ್ತದೆ (9/11).... ನಾನೇನೋ ಸಿದ್ಧಾಂತಶಿಖಾಮಣಿಯ ಕರ್ತೃ ಬಸವನ ಹಿರಿಯ ಸಮಕಾಲೀನನೆಂದು, ಅದು ಬಸವನ ಕಾಲದಲ್ಲೇ ರಚಿತವಾಗಿದ್ದು ಬಸವನ ಅಧ್ಯಯನಕ್ಕೆ ಲಭ್ಯವಾಗಿತ್ತೆಂದು ಸಾಧಾರವಾಗಿ ತರ್ಕಿಸಿದ್ದೇನೆ'' ಎಂದಿದ್ದಾರೆ. ಅಂದರೆ ಹೀಗೆ ಈ ಸಂಶೋಧಕರಲ್ಲಿ ಸತ್ಯ ನಿರ್ಣಯ ಪ್ರಜ್ಞೆ ಕುಂಠಿತವಾಗಿ ಜಾತಿಯ ಅಭಿಮಾನ ಹೆಡೆ ಎತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

2. ವಚನಗಳಲ್ಲಿ ಕೆಲವು ಸಹಜವಾಗಿ ಉಕ್ತಿಗಳಾಗಿ ಹೇಳಲ್ಪಟ್ಟ ಸಂಸ್ಕೃತ ವಾಕ್ಯ, ಉಪಮೆ, ಉದಾಹರಣೆ ಹೊರತಾಗಿ ಆ ವಚನದ ಭಾವವನ್ನು ಪುಷ್ಟೀಕರಿಸುವ ಕೆಲವೊಮ್ಮೆ ಎಷ್ಟೂ ಹೊಂದದೆ ಇರುವ ಸಂಸ್ಕೃತ ಶ್ಲೋಕಗಳು ಕಾಣಿಸಿಕೊಳ್ಳುವುದಕ್ಕೆ ಇನ್ನೂ ಒಂದು ಕಾರಣವನ್ನು ಗುರುತಿಸಬಹುದು.

ಸಾಮಾನ್ಯವಾಗಿ ಪ್ರವಚನಕಾರರು, ಶಿಷ್ಯರಿಗೆ ಬೋಧೆ ಮಾಡುವ ಗುರುಗಳು, ಪಾಠಕರು ವಿಷಯಗಳನ್ನು ವ್ಯಾಖ್ಯಾನಕ್ಕೆ ಸಂಗ್ರಹಿಸುವಾಗ ಕೆಲವೊಂದು ವಿಷಯಗಳಿಗೆ ಪೂರಕವಾಗಿ ಇತರ ಶಾಸ್ತ್ರಗಳ ಉಕ್ತಿಗಳನ್ನು ಬಳಸಿಕೊಳ್ಳುವುದುಂಟು. ಕೆಲವೊಮ್ಮೆ ವಿರುದ್ಧ ವಿಚಾರಗಳನ್ನು ಹೇಳಿ ತೌಲನಿಕವಾಗಿ ವಿಮರ್ಶೆ ಮಾಡುವುದುಂಟು. ಹಾಗೆ ವಚನಗಳನ್ನು ಸಂಗ್ರಹಿಸುವಾಗ ಅವಕ್ಕೆ ಪೂರಕವಾದ ಮತ್ತು ಕೆಲವೊಮ್ಮೆ ವಿರುದ್ಧವಾದ ವಿಚಾರಗಳನ್ನು ಬರೆದಿಟ್ಟುಕೊಂಡಿರಬಹುದು. ನಂತರದವರು ಪ್ರತಿ ಮಾಡುವಾಗ ಅಂಥ ಶ್ಲೋಕಗಳನ್ನು ವಚನಗಳಲ್ಲಿ ಸೇರಿಸಿ ಪ್ರತಿ ಮಾಡಿರಲಿಕ್ಕೂ ಸಾಕು. ಅಚ್ಚ ಕನ್ನಡದಲ್ಲಿ ವಚನಕಾರರು ವಚನಗಳನ್ನು ಬರೆದಿದ್ದರೂ ಸಂಸ್ಕೃತ ಪ್ರೇಮಿಗಳು ವಚನ ಭಾವಕ್ಕೆ ಹೋಲುವಂತಹ ಸಂಸ್ಕೃತ ಶ್ಲೋಕಗಳನ್ನು ವಚನಗಳಲ್ಲಿ ತುಂಬಿರುವ ಪ್ರಸಂಗಗಳೂ ಕಾಣಸಿಗುತ್ತವೆ. ಈ ಹಿನ್ನೆಲೆಯಿಂದ ನೋಡಿದಾಗ 12 ಶತಮಾನದ ನಂತರ ಬರೆಯಲ್ಪಟ್ಟ ಸಂಸ್ಕೃತ ಗ್ರಂಥಗಳ ಶ್ಲೋಕಗಳು ಸಹ ವಚನಗಳನ್ನು ತಾಡ ಓಲೆಗಳ ಮೇಲೆ ಯಾಂತ್ರಿಕವಾಗಿ ಪ್ರತಿ ಮಾಡುವವರಿಂದ ಸೇರಿಸಲ್ಪಟ್ಟಿರುವ ಸಾಧ್ಯತೆ ಇದೆ.

ಸಿದ್ಧಾಂತ ಶಿಖಾಮಣಿ ಕುರಿತ ಕೆಲವು ಸಂದೇಹಗಳು

ಪಂಚ ಪೀಠಾಧೀಶರು ಮತ್ತು ವೀರಶೈವ ವಾದಿಗಳು ತಮ್ಮ 'ಬೈಬಲ್' ಎಂದು ಭಾವಿಸುವ ಸಿದ್ಧಾಂತ ಶಿಖಾಮಣಿಯ ಬಗ್ಗೆ ಇರುವ ಹಲವಾರು ಸಂದೇಹಗಳೆಂದರೆ,

1. ಇದು 12ನೆಯ ಶತಮಾನಕ್ಕೂ ಪೂರ್ವದ ಗ್ರಂಥವೆ ?
2. ರೇಣುಕಾಚಾರ್ಯರು ಅಥವಾ ರೇವಣಸಿದ್ಧೇಶ್ವರರು ಯಾವ ಅಗಸ್ತ್ಯನಿಗೆ ಯಾವ ಶತಮಾನದಲ್ಲಿ ಬೋಧಿಸಿದರು ?
3. ಸಿದ್ಧಾಂತ ಶಿಖಾಮಣಿಯು ನಿಜವಾಗಿಯೂ ವೀರಶೈವವನ್ನು ಬೋಧಿಸುತ್ತದೆಯೆ?
4. ಸಿ.ಶಿ.ಯು ಲಿಂಗಾಯತ ಧರ್ಮದ ತತ್ತ್ವಜ್ಞಾನ ಮತ್ತು ಆಚಾರ-ವಿಚಾರಕ್ಕೆ ಹೋಲಿಕೆ ಹೊಂದಿರುವ ವಿಚಾರಗಳನ್ನು ಒಳಗೊಂಡಿದೆಯೆ ?
5. ತಮ್ಮ ಅಧಿಕೃತ ಶಾಸ್ತ್ರಗ್ರಂಥ ಎಂದು ಹೆಮ್ಮೆ ಪಡುವ ಪಂಚಾಚಾರ್ಯ ಮಠಗಳವರು ಸಿದ್ಧಾಂತ ಶಿಖಾಮಣಿಯ ಬೋಧೆಯಂತಾದರೂ ನಡೆಯುವರೆ ?

1. 12ನೆಯ ಶತಮಾನಕ್ಕೂ ಪೂರ್ವದ ಗ್ರಂಥವೆ ?

ಕೃತಿಕಾರನಾದ ಶಿವಯೋಗಿ ಶಿವಾಚಾರ್ಯನ ವಂಶವಿವರದ ಪ್ರಕಾರ ಸಿದ್ಧರಾಮೇಶ್ವರರ ನಂತರದ ಕೃತಿ ಎಂದು ಊಹಿಸಬಹುದು. ಅನುಭವ ಮಂಟಪಕ್ಕೆ ಆಗಮಿಸಿದ ಶರಣರು ಜಂಬೂದ್ವೀಪದ (ನಮ್ಮ ದೇಶದ ಆಗಿನ ಹೆಸರು) ಎಲ್ಲ ಭಾಗಗಳಿಂದ ಆಗಮಿಸಿದವರಾಗಿದ್ದರು. ಅವರಾರು ಈ ಗ್ರಂಥದ ಬಗ್ಗೆ ಪ್ರಸ್ತಾಪಿಸಿಲಿಲ್ಲವೇಕೆ ? ಬಸವಣ್ಣನವರ ಒಂದು ವಚನ (ಬ.ವ.ದೀ 503) ನೀನೊಲಿಯಿತ್ತೇ ಪುಣ್ಯ. ಇದರಲ್ಲಿ ಬರುವ ಒಂದು ಶ್ಲೋಕ "ಪ್ರಸಾದಾದೇವಸಾಂ" ಎಂಬ ಸಂಸ್ಕೃತ ಶ್ಲೋಕ ಶಿ.ಸಿ.ಯಲ್ಲಿದೆ. ಆದ್ದರಿಂದ ಅದು 12ನೆಯ ಶತಮಾನಕ್ಕೂ ಪೂರ್ವದ್ದು ಎಂಬ ಊಹೆಯಲ್ಲಿ ಹುರುಳಿಲ್ಲ ಏಕೆಂದರೆ ಈ ಶ್ಲೋಕವು ವಾತುಲಾಗಮ, ಲಿಂಗಪುರಾಣ, ಶಿವಪುರಾಣ ಮುಂತಾದ ಪುರಾತನ ಶೈವಗ್ರಂಥಗಳಲ್ಲಿ ಕಾಣಿಸಿಕೊಂಡಿದೆ. ಸಿದ್ಧಾಂತ ಶಿಖಾಮಣಿ ಒಂದು ವೇಳೆ ಮೊದಲೇ ಇದ್ದಿದ್ದರೆ ಶರಣರು ಅಭಿಮಾನದಿಂದ

ಹೊಗಳುತ್ತಿದ್ದರು, ವಿಚಾರ ಭಿನ್ನಾಭಿಪ್ರಾಯವಿದ್ದರೆ ಅದನ್ನು ಖಂಡಿಸುತ್ತಿದ್ದರು. ಖಂಡನೆ, ಮಂಡನೆ ಎರಡೂ ಮಾಡಿಲ್ಲವೇಕೆ ? ಸಂಸ್ಕೃತ ಭಾಷಾ ಶೈಲಿಯಿಂದಲೂ ಅದು ಪುರಾತನ ಸಂಸ್ಕೃತ ಎನ್ನಿಸದೆ ಮಧ್ಯ ಕಾಲೀನ ಸಂಸ್ಕೃತ ಎನ್ನಿಸುವುದೆಂದು ಅನೇಕ ಸಂಸ್ಕೃತ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. 'ಸಹಜ ಮಾಟ ಸ್ಥಲ' ಎನ್ನುವ ಒಂದು ಸ್ಥಲ ಬರುತ್ತದೆ. ಮಾಟ, ಕೂಟ, ನೋಟ ಇವು ಅಚ್ಚಕನ್ನಡದ ಪದಗಳು. ಅಂದರೆ ಇದರರ್ಥ ಕನ್ನಡದ ಪದಗಳನ್ನು ಶಿವಯೋಗಿ ಶಿವಾಚಾರ್ಯನು ಯಥಾವತ್ತಾಗಿ ಬಳಸಿಕೊಂಡಿದ್ದರೆಂದು ಅರ್ಥವಾಗುವುದಲ್ಲವೆ ? ಕೆಲವು ಭಾಷೆಗಳಲ್ಲಿ ಬರುವ ಪದಗಳಿಗೆ ತನ್ನದೇ ಆದ ಪರಿಕಲ್ಪನೆ (concept) ಇರುತ್ತದೆ. ಅವುಗಳನ್ನು ಅಷ್ಟೇ ಶಕ್ತಿಯಾಗಿ ಸಂವಹನ ಮಾಡಲು ಇನ್ನಿತರ ಭಾಷೆಗಳಲ್ಲಿ ಪದಗಳು ಇರುವುದಿಲ್ಲ. ಉದಾಹರಣೆಗೆ 'ಯೋಗ'. ಇದನ್ನು ಇಂಗ್ಲೀಷ್‌ನಲ್ಲಿ ಏನೆಂದು ಭಾಷಾಂತರಿಸಬಹುದು. ಅದಕ್ಕಾಗಿ ಇಂಗ್ಲೀಷ್ ಪದಕೋಶದಲ್ಲಿ ಯೋಗ ಎಂದೇ ಇಟ್ಟುಕೊಳ್ಳಲಾಗಿದೆ. ಅದೇ ರೀತಿ ವಚನ ಸಾಹಿತ್ಯದ ಸಹಜ ಮಾಟ, ಲಿಂಗ ಕೂಟ ಮುಂತಾದ ಪದಗಳು ವಚನ ಸಾಹಿತ್ಯದಲ್ಲಿ ವಿಶೇಷವಾದ ಪರಿಕಲ್ಪನೆಯಿಂದ ಕೂಡಿವೆ. ಅವುಗಳನ್ನು ಭಾಷಾಂತರಿಸಲು ಬರದು. ಆದಕ್ಕಾಗಿಯೇ ಶಿವಯೋಗಿ ಶಿವಾಚಾರ್ಯನು ಈ ಪದಗಳನ್ನು ಹಾಗೆಯೇ ಇಟ್ಟುಕೊಂಡಿದ್ದಾನೆ.

ಸಂಕಲನ ಗ್ರಂಥ

ಪೂಜ್ಯ ಡಾ|| ಇಮ್ಮಡಿ ಶಿವಬಸವ ಸ್ವಾಮಿಗಳು ಪ್ರಕಟಿಸಿರುವ ಅತ್ಯಂತ ಮಹತ್ವಪೂರ್ಣ "ಸಿ.ಶಿ ಹಾಗೂ ಶ್ರೀಕರ ಭಾಷ್ಯ: ನಿಜದ ನಿಲುವು" ಎಂಬುದು ಬಹಳ ಅಮೂಲ್ಯ ಗ್ರಂಥವಾಗಿದ್ದು ವಿಷಯಗಳನ್ನು ವಿಸ್ತಾರದಿಂದ ನನ್ನನ್ನು ವಿಶೇಷವಾಗಿ ಆಕರ್ಷಿಸಿದ್ದಷ್ಟೇ ಅಲ್ಲ ಸಿದ್ಧಾಂತ ಶಿಖಾಮಣಿಯನ್ನು ಓದಲು ಪ್ರೇರಣೆ ನೀಡಿತು. ಈವರೆಗೂ ಯಾವ ವಿಮರ್ಶಕರೂ ಮಾಡದ ಸವಿಸ್ತಾರವಾದ ಅಧ್ಯಯನವನ್ನು ಶ್ರೀಗಳು ಮಾಡಿರುವುದಷ್ಟೇ ಅಲ್ಲ ಸಿದ್ಧಾಂತ ಶಿಖಾಮಣಿ ಒಂದು ಸಂಕಲನ ಗ್ರಂಥ ಎಂಬ ವಿನೂತನ ಆದರೆ ಸತ್ಯವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. "ಶರಣರ ವಚನೋಕ್ತಿಗಳಲ್ಲಿನ ಸಂಸ್ಕೃತೋಕ್ತಿಗಳ ಮೂಲಾಧಾರಕ್ಕಾಗಿ ಅನೇಕ ಗ್ರಂಥಗಳನ್ನು ಪರಿಶೀಲಿಸುತ್ತಿದ್ದಾಗ ಸಿ.ಶಿ.ಯ ಬಗ್ಗೆಯೂ ಒಂದು ಮಹತ್ವದ ಮಾಹಿತಿ ದೊರೆಯಿತು. ಸಿ.ಶಿ. ಸ್ವತಂತ್ರ ಗ್ರಂಥವೆಂದೇ ಅದುವರೆಗೆ ತಿಳಿದಿದ್ದ ನನಗೆ ಅನೇಕ ಗ್ರಂಥಗಳ ಪರಿಶೀಲನೆಯಿಂದ ಅದು ಸಂಕಲನ ಗ್ರಂಥ ಎಂದು ವಿದಿತವಾಯಿತು. ಪ್ರಸ್ತುತ ಸಿ.ಶಿ.ಯ ಶ್ಲೋಕಗಳಿಗೂ ಆಕರವನ್ನು ಅನ್ವೇಷಣೆ ಮಾಡಿದಂತೆಲ್ಲ ಅನ್ಯಾನ್ಯ ಆಕರಗಳು ದೊರೆಯುತ್ತಾ ಹೋದವು. ಈ ಕೃತಿಯ 1200 ಶ್ಲೋಕಗಳಲ್ಲಿ 350 ಶ್ಲೋಕಗಳಿಗೆ ಆಕರಗಳು ಪತ್ತೆಯಾದವು." ಪುಟ vii ಮೊದಲ ಮಾತು.

ಸಿದ್ಧಾಂತ ಶಿಖಾಮಣಿಯು 12ನೆಯ ಶತಮಾನಕ್ಕೂ ಪೂರ್ವದ ಗ್ರಂಥ ಎಂದು ಕೃತ್ರಿಮವಾಗಿ ಕಷ್ಟಪಟ್ಟು ಸಾಧಿಸಲು ಪಂಚಾಚಾರ್ಯ ವಾದಿಗಳು ಕೆಲವು ಗ್ರಂಥಗಳನ್ನು ಉಲ್ಲೇಖಿಸುತ್ತಾರೆ.

1. ಹನ್ನೊಂದನೆಯ ಶತಮಾನದಲ್ಲಿದ್ದ ಶ್ರೀಪತಿ ಪಂಡಿತನು ರಚಿಸಿದನು ಎಂದು ಪ್ರತಿಪಾದಿಸುವ ಶ್ರೀಕರ ಭಾಷ್ಯ
2. 1270ರಲ್ಲಿ ಶ್ರೀಕಂಠ ಶಿವಾಚಾರ್ಯ
3. ನೀಲಕಂಠ ಶಿವಾಚಾರ್ಯನು ಬರೆದ ಕ್ರಿಯಾಸಾರ.

ಒಂದು ಸುಳ್ಳನ್ನು ಸತ್ಯವನ್ನಾಗಿ ಮಾಡಲು ನಾನಾ ಸುಳ್ಳುಗಳನ್ನು ಪೋಣಿಸಿದರೂ, ಮತ್ತಷ್ಟು ಗೋಜಲು ಉಂಟಾಗುವುದೇ ವಿನಾ ಸತ್ಯವು ಗೋಚರವಾಗುವುದಿಲ್ಲ. ಪಂಚಾಚಾರ್ಯ ವಾದದ ಪ್ರಬಲ ಪ್ರತಿಪಾದಕರಾದ ಡಾ|| ಎಂ. ಶಿವಕುಮಾರ ಸ್ವಾಮಿಯವರು ದಾಸಗುಪ್ತರ ಆಧಾರದ ಮೇಲೆ ಶ್ರೀಕಂಠ ಶಿವಾಚಾರ್ಯನ ಕಾಲವನ್ನು ಕ್ರಿ.ಶ. 1270 ಎಂದು ಅನುಮೊದಿಸುತ್ತ ಸಿ.ಶಿ.ಯ ವಾಕ್ಯವು ಶ್ರೀಕಂಠ ಭಾಷ್ಯದಲ್ಲಿ ಉದಾಹೃತವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. (ಸಿದ್ಧಾಂತ ಶಿಖಾಮಣಿ: ಮೂರು ಉಪನ್ಯಾಸಗಳು ಪೂರ್ವೋಕ್ತ ಪುಟ 5) ಆದರೆ ಆಶ್ಚರ್ಯದ ವಿಷಯವೇನೆಂದರೆ ಶ್ರೀಕರ ಭಾಷ್ಯದ ಕರ್ತೃ ಎನ್ನಲಾದ ಶ್ರೀಪತಿ ಪಂಡಿತನು ಶ್ರೀಕಂಠ ಶಿವಾಚಾರ್ಯನನ್ನು ಎರಡು ಕಡೆ ಹೆಸರಿಸಿ ಅವನ ಸಿದ್ಧಾಂತವನ್ನು ಖಂಡಿಸುತ್ತಾನೆ. (ಶ್ರೀಕರ ಭಾಷ್ಯಮ್. ಸಂ|| ಪ್ರೊ. ಎಂ.ಜಿ. ನಂಜುಂಡಾರಾಧ್ಯರು, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ಸಂ. 1, ಪುಟ 400, ಸಂ. 2, ಪುಟ 216) 11ನೆಯ ಶತಮಾನದಲ್ಲಿದ್ದ ಶ್ರೀಪತಿ ಪಂಡಿತನು 13ನೆಯ ಶತಮಾನದ ಶ್ರೀಕಂಠ ಶಿವಾಚಾರ್ಯನನ್ನು ಹೇಗೆ ಉದಾಹರಿಸಿ, ಖಂಡಿಸಲು ಸಾಧ್ಯ?

ಪಂಚಾಚಾರ್ಯವಾದಿ ಸ್ವಾಮಿಗಳು, ಡಾ|| ಎಂ. ಶಿವಕುಮಾರ ಸ್ವಾಮಿ, ಮುಂತಾದ ವಿದ್ವಾಂಸರುಗಳು ಅದೆಷ್ಟು ಕಷ್ಟಪಟ್ಟು ಸಿದ್ಧಾಂತ ಶಿಖಾಮಣಿ, ಶ್ರೀಕರ ಭಾಷ್ಯ ಮುಂತಾದವು ಬಸವ ಪೂರ್ವದವು ಎಂದು ಸಾಧಿಸಲು ಪ್ರಯತ್ನ ಮಾಡುತ್ತಾರೆ. ಆದರೆ ಇವೆಲ್ಲ ಗ್ರಂಥಗಳಿಗೂ, ಇವುಗಳನ್ನು ಬೋಧೆ ಮಾಡಿದ ಪಂಡಿತ-ಆಚಾರ್ಯರುಗಳಿಗೂ ಮತ್ತು ವಚನ ಸಾಹಿತ್ಯದ ವಿಚಾರಧಾರೆ, ಅವುಗಳ ಕರ್ತೃಗಳಾದ ಶರಣರಿಗೆ ಸ್ವಲ್ಪವಾದರೂ ಸಾಮ್ಯವಿದೆಯೇ ಎಂಬುದು ಚಿಂತನಾರ್ಹ.

ಮುಂದುವರಿಯುವುದು..........

ವಚನ ಕಿರಣ

ಶೋಧನೆಯ ಕಾರ್ಯದಿ ಸಾಧಿಸುತಿಹರು
ಸತ್ಯವ ಪ್ರತಿಪಾದಿಸಿ ಸಿದ್ಧಿಯ ಪಡೆಯುತಿಹರು
ಜ್ಞಾನ ಪಥದಿ ನಡೆದು ದಿವ್ಯ ಮಾರ್ಗ ಹಿಡಿಸಿಹರು
ಬಸವ ಯುಗವ ಮತ್ತೆ ತಂದಿಹರು ಇಪ್ಪತ್ತೊಂದನೆ ಶತಮಾನದಿ
ಬಸವ ಧರ್ಮ ಚಿರಕಾಲ ಉಳಿವಂತೆ ಮಾಡಿಹರು ಬಸವಾತ್ಮಜೆ
ಹೇ ಲೀಲಾ ವಿಶೇಷ ಲಿಂಗದೇವ

ಅಂದು ಒಬ್ಬ ಜಂಗಮದ ಅಭಿಮಾನದಿಂದ ಹಾಳಾಯಿತ್ತು ಕಲ್ಯಾಣ
ಇಂದು ಒಬ್ಬ ಜಂಗಮಳ ಅಭಿಮಾನದಿಂದ ಕಲ್ಯಾಣಕ್ಕೆ ಕಳೆಯೇರಿತ್ತು.
ಮಠಾಧಿಪತಿಗಳ ಕ್ರೂರತ್ವಬೀದಿ ಪಾಲಾಯಿತ್ತು
ಸರ್ವಜನಕೆ ಶರಣರ ರಾಜ ಮಾರ್ಗ ಒದಗಿತ್ತು
ಕಲ್ಯಾಣ ಪರ್ವದ ಜಯಭೇರಿಯಲ್ಲಿ
ಹೇ ಲೀಲಾ ವಿಶೇಷ ಲಿಂಗದೇವ

- ಪೂಜ್ಯ ಮಾತೆ ಜ್ಞಾನೇಶ್ವರಿ


|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666



ಧರ್ಮಗುರು
ಬಸವಣ್ಣ

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹದಿನೆಂಟನೆಯ



ಗಣ ಧ್ವಜ

ಶರಣ ಮೇಳ

2005ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನೆಂಟನೆಯ ಶರಣ ಮೇಳವು 2005ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧ ಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪಾಲ್ಗೊಳ್ಳಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು.	4. ಹಿತೈಷಿಗಳು	: 500 ರೂ.
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು.	5. ಸ್ವಾಗತ ಸಮಿತಿ ಸದಸ್ಯತ್ವ	: 250 ರೂ.
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು.	6. ಪ್ರತಿನಿಧಿ ಶುಲ್ಕ	: 125 ರೂ.

ಅನ್ನದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ. ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಬಸವ ಧರ್ಮದ ಮಹಾಜಗದ್ಗುರು ಪೀಠ

ಮಹಾಮನೆ ಮಹಾಮಠ, ಕೂಡಲ ಸಂಗಮ ಸುಕ್ಷೇತ್ರ-587115, ತಾ-ಹುನಗುಂದ, ಜಿ-ಬಾಗಲಕೋಟೆ

ಕೂಡಲ ಸಂಗಮ ಸುಕ್ಷೇತ್ರವು ಚಾರಿತ್ರಿಕ ಹಿನ್ನೆಲೆಯನ್ನೊಳಗೊಂಡ, ಸುಪ್ರಸಿದ್ಧ ಸಂಗಮೇಶ್ವರ ದೇವಾಲಯವನ್ನು ಹೊಂದಿದ ಧಾರ್ಮಿಕ ಸ್ಥಾನ. ಕೃಷ್ಣಾ-ಮಲಪ್ರಭಾ ನದಿಗಳ ಸಂಗಮದಿಂದಾಗಿ, ಇದೀಗ ಬಸವ ಸಾಗರ ಜಲಾಶಯದ ನಿರ್ಮಾಣದಿಂದಾಗಿ ಪ್ರಾಕೃತಿಕ ಚೆಲುವಿನಿಂದ ಶೋಭಿಸುತ್ತಿರುವ ಸುಂದರ ತಾಣ. ಚಿನ್ನಕ್ಕೆ ಸುವಾಸನೆ ಬಂದಂತೆ ಇಂತಹ ಕ್ಷೇತ್ರದ ಮಹಿಮೆ ವಿಶ್ವವಿಖ್ಯಾತಿಯನ್ನು ಹೊಂದುವಂತಾಗಿರುವುದು ವಿಶ್ವಗುರು ಬಸವಣ್ಣನವರ ಪಾದ ಸ್ಪರ್ಶದಿಂದಾಗಿ. "ಮಹಾಮಹಿಮ ಸಂಗನ ಬಸವಣ್ಣನು ಪಾದವಿಟ್ಟುದು ಅವಿಮುಕ್ತ ಕ್ಷೇತ್ರ" ಎಂದು ಜಗನ್ಮಾತೆ ಅಕ್ಕ ಮಹಾದೇವಿ ನುಡಿದ ಪ್ರಕಾರ ಕೂಡಲ ಸಂಗಮವು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರವಾಗಿ ಇಂದು ಪುಣ್ಯಭೂಮಿಯಾಗಿ ಕಂಗೊಳಿಸುತ್ತಿದೆ. ಮುಸಲ್ಮಾನರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಮಹತ್ವದ ಧರ್ಮಕ್ಷೇತ್ರಗಳಾದಂತೆ ಬಸವ ಧರ್ಮೀಯರಾದ ಲಿಂಗಾಯತರಿಗೆ ಕೂಡಲ ಸಂಗಮವೇ ಧರ್ಮಕ್ಷೇತ್ರ. ಇಂತಹ ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದ ಶ್ರೀ ಗುರು ಬಸವಣ್ಣನವರ ದಿವ್ಯಪ್ರೇರಣೆಯಂತೆ, ಬಸವ ಧರ್ಮ ಪೀಠ ಎಂಬ ವಿಶ್ವಸ್ಥ ಸಂಸ್ಥೆ (ಟ್ರಸ್ಟ್)ಯೊಂದನ್ನು ಮುಂಬಯಿಯ 1950ನೇ ಟ್ರಸ್ಟ್ ಆಕ್ಟ್ ಪ್ರಕಾರ ನೊಂದಾಯಿಸಲಾಗಿದೆ. ನೋಂದಣಿ ಸಂಖ್ಯೆ : **A 1758 (BJP)**. ಲಿಂ॥ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಗೌರವಾಧ್ಯಕ್ಷರಾಗಿ ಸಾಗಿ ಬಂದ ಈ ಟ್ರಸ್ಟಿನ ಕಾರ್ಯಾಧ್ಯಕ್ಷರಾಗಿ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು, ಕೋಶಾಧ್ಯಕ್ಷರಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು, ಸದಸ್ಯರಾಗಿ ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮಿಗಳು, ಶ್ರೀ ಚನ್ನಬಸವರಾಜ ಸ್ವಾಮಿಗಳು, ಶ್ರೀ ಬಸವ ಕುಮಾರ ಸ್ವಾಮಿಗಳು, ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು, ಶ್ರೀ ಚನ್ನಬಸವಾನಂದ ಸ್ವಾಮೀಜಿ, ಮಾತೆ ಬಸವರತ್ನಾದೇವಿ, ಮಾತೆ ಅಕ್ಕಮಹಾದೇವಿ, ಮಾತೆ ನೀಲಗಂಗಾದೇವಿ, ಮಾತೆ ಮಂಗಳಾದೇವಿ, ಮಾತೆ ದಾನೇಶ್ವರಿ, ಮಾತೆ ಕಸ್ತೂರಿದೇವಿ, ಮಾತೆ ಜ್ಞಾನೇಶ್ವರಿ, ಮಾತೆ ಸರ್ವ ಮಂಗಳಾ ದೇವಿ, ಮಾತೆ ನಿಶ್ಚಲಾಂಬ ಮತ್ತು ಅನೇಕ ತ್ಯಾಗಜೀವಿಗಳು ಹಗಲಿರುಳು ದುಡಿಯುತ್ತಿದ್ದಾರೆ. ಬಸವ ಧರ್ಮ ಪೀಠ ಟ್ರಸ್ಟ್ ಸುಮಾರು ಇಪ್ಪತ್ತಾರು ಎಕರೆ ಜಮೀನನ್ನು ಖರೀದಿಸಿದ್ದು ಇಲ್ಲಿ 'ಮಹಾಮನೆ' ಎಂಬ ಮಹಾಮಠವು ನಿರ್ಮಾಣವಾಗಿದೆ. ಈಗಾಗಲೇ ಚನ್ನಬಸವೇಶ್ವರ ಜ್ಞಾನಮಂಟಪ ಎಂಬ ಪುಸ್ತಕ ಮಳಿಗೆಯ ಕಟ್ಟಡಗಳು ನೀರಿನ ಟ್ಯಾಂಕ್‌ಗಳು ನಿರ್ಮಾಣಗೊಂಡಿದ್ದು 'ಮಹಾಮನೆ' ಎಂಬ ಆಡಳಿತ ಕಟ್ಟಡವು ಪೂರ್ಣಗೊಂಡಿದೆ. 'ಗಣಲಿಂಗ ಮಂಟಪ' ಎಂಬ ಮುಖ್ಯ ಆಲಯ 6 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ದಿ. 14-1-1996 ರಂದು ಸ್ಥಾಪನೆಗೊಂಡ ಗಣಲಿಂಗವು ವಿಶೇಷ ಶಕ್ತಿ ಕೇಂದ್ರವಾಗಿ ದರ್ಶನಕ್ಕೆ ಲಭ್ಯವಿದೆ. ಬಸವ ಧ್ಯಾನ ಮಂಟಪವು 8 ಲಕ್ಷ ರೂ.ಗಳ ವೆಚ್ಚದಲ್ಲಿ ಸಿದ್ಧವಾಗಿದ್ದು ಗುರು ಬಸವಣ್ಣನವರ ದಿವ್ಯ ಮೂರ್ತಿಯನ್ನು ಹೊಂದಿದೆ. ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಅಧಿಕಾರಿಗಳಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಶರಣಾಲಯ (ಗದ್ದುಗೆಯು) ಕಮಲದಾಕೃತಿಯಲ್ಲಿ ರೂಪುಗೊಂಡಿದೆ. 20 ಶರಣರ ಮಂಟಪಗಳು, ಭವ್ಯ ಮತ್ತು ದಿವ್ಯವಾಗಿದೆ. ಜೀವನದಲ್ಲಿ ಯಾವುದೇ ಶುಭ ಪ್ರಸಂಗ, ಮದುವೆ, ನೌಕರಿ ಪ್ರಾಪ್ತಿ ಮಗುವಿನ ಜನನ, ಗೃಹ

ಪ್ರವೇಶ, ಉದ್ಯಮ ಪ್ರಾರಂಭ ಇತ್ಯಾದಿ ನಡೆದಾಗ ತಪ್ಪದೆ ಬಂದು ಬಸವ ಮಹಾಮಂಟಪದಲ್ಲಿ ಸ್ವತಃ ಪೂಜೆ ಸಲ್ಲಿಸಿ, ದಾಸೋಹ ಮಾಡಿಸಿ ಕಾಣಿಕೆ ನೀಡಿ ಧರ್ಮಗುರುವಿಗೆ ಕೃತಜ್ಞತೆ ತೋರಿಸಿರಿ.

ಸದ್ಭಕ್ತರಿಗೆ ದೊರಕುವ ಸೌಲಭ್ಯಗಳು

ಕೂಡಲ ಸಂಗಮ ಸುಕ್ಷೇತ್ರವನ್ನು, ಮಹಾಮನೆ ಮಹಾಮಠವನ್ನು ಸಂದರ್ಶಿಸುವ ಯಾತ್ರಾರ್ಥಿಗಳಿಗೆ ದಾಸೋಹದ ವ್ಯವಸ್ಥೆ ಇರುತ್ತದೆ. ಬೆಳಿಗ್ಗೆ 10 ಗಂಟೆಯಿಂದ 11-30 ರವರೆಗೆ ಉಪಾಹಾರವನ್ನು, ಮಧ್ಯಾಹ್ನ 12 ರಿಂದ 4ರವರೆಗೆ ಊಟವನ್ನು ಕೊಡಲಾಗುವುದು. 50 ಕೋಣೆಗಳ "ಅಕ್ಕನಾಗಲಾಂಬಿಕಾ ಶರಣ ಧಾಮ" ಮತ್ತು 60 ಕೋಣೆಗಳ "ಸರ್ವಜ್ಞ ಶರಣ ಧಾಮವು" ಸಿದ್ಧವಾಗಿರುವುದರಿಂದ ವಸತಿಯ ಸೌಲಭ್ಯವು ಯಾತ್ರಾರ್ಥಿಗಳಿಗೆ ಲಭ್ಯವಾಗುತ್ತದೆ. ಪ್ರತ್ಯೇಕವಾದ ಸಾರ್ವಜನಿಕ ಶೌಚಾಲಯ ಮತ್ತು ಸ್ನಾನ ಗೃಹಗಳೂ ಸಿದ್ಧವಾಗಿವೆ. ಶಾಲೆ-ಕಾಲೇಜುಗಳ ಪ್ರವಾಸಿ ತಂಡದವರು ಮತ್ತು ಇನ್ನಿತರ ಪ್ರವಾಸಿ ತಂಡದವರಿಗೆ ಪೂರ್ವಭಾವಿ ಬೇಡಿಕೆಯೊಡನೆ ಉಪಾಹಾರ-ಊಟಗಳನ್ನು ಸಿದ್ಧಪಡಿಸಿ ಕೊಡಲಾಗುವುದು. ವಿವಾಹ ಕಾರ್ಯಕ್ಕೆ ದೊಡ್ಡ ಸಭಾ ಭವನ, ವಾಸ್ತವ್ಯಕ್ಕೆ ಕೋಣೆಗಳು, ಪಾತ್ರೆ ಮುಂತಾದ ಸೌಕರ್ಯಗಳು ಲಭ್ಯವಿರುವುದರಿಂದ ಮದುವೆಗಳನ್ನು ಮಾಡುವುದಕ್ಕೂ ಸೂಕ್ತ ಅನುಕೂಲತೆಗಳಿವೆ.

ಧನ ಸಹಾಯಕ್ಕೆ ಮನವಿ

ಕೂಡಲ ಸಂಗಮ ಕ್ಷೇತ್ರದರ್ಶನಕ್ಕೆ ಬಂದವರಿಗೆ ವಸತಿ-ಊಟಗಳ ಸೌಲಭ್ಯ ಇಲ್ಲದ್ದನ್ನು ಗಮನಿಸಿ ಬಸವ ಧರ್ಮ ಪೀಠ ಟ್ರಸ್ಟ್ ರಚಿಸಿ ಹಲವಾರು ಕಾರ್ಯಗಳನ್ನು ಮಾಡಲಾಗುತ್ತಿದೆ. ಶರಣರ ಮಂಟಪಗಳನ್ನು ವಿಸ್ತರಿಸಲಾಗುತ್ತಿದೆ. 80 ಕೋಣೆಗಳ ಇನ್ನೊಂದು ವಸತಿ ಗೃಹ "ಸರ್ವಜ್ಞ ಶರಣ ಧಾಮ"ದ ನಿರ್ಮಾಣ ಪೂರೈಸುತ್ತಿದೆ. ಬಸವಾಲಯ ಎಂಬ ಪೂಜಾ ಮಂದಿರವನ್ನು ಮತ್ತು ಪ್ರವಚನ ಮಂದಿರವೊಂದನ್ನು ನಿರ್ಮಿಸಲಾಗುತ್ತಿದೆ. ಇವೆಲ್ಲವುಗಳ ನಿರ್ಮಾಣಕ್ಕೆ ಹಣದ ಅವಶ್ಯಕತೆ ಬಹಳವಿದೆ. 1. ಹೆಚ್ಚಿನ ಪ್ರಮಾಣದಲ್ಲಿ ಅಂದರೆ 1 ಲಕ್ಷ ರೂ.ಗಳ ಮೇಲೆ ಧನ ಸಹಾಯ ಮಾಡುವವರ ಹೆಸರಿನಲ್ಲಿ ಪ್ರವಾಸಿ ಧಾಮದ ಬೇರೆ ಬೇರೆ ಬ್ಲಾಕುಗಳನ್ನು ಕಟ್ಟಸಲಾಗುತ್ತದೆ. 2. ಡಬ್ಬಲ್ ಕೋಣೆ (ಶೌಚಾಲಯ-ಸ್ನಾನಗೃಹಗಳೊಡನೆ)ಗೆ ರೂ. 71,000/- 3. ಸಿಂಗಲ್ ಕೋಣೆ (ಶೌಚಾಲಯ-ಸ್ನಾನಗೃಹಗಳೊಡನೆ)ಗೆ ರೂ. 51,000/- ಈ ರೀತಿ ಕೊಟ್ಟವರ ಹೆಸರುಗಳನ್ನು ಕೆತ್ತಿಸಿ ಆಯಾ ಕೋಣೆಗಳ ಮುಂದೆ ಶಿಲಾಫಲಕಗಳನ್ನು ಹಾಕಲಾಗುವುದು. ದಾಸೋಹ ನಿಧಿಗೆ ರೂ. 1111/- ಮತ್ತು ರೂ. 501/- ಕೊಟ್ಟರೆ ಆ ಹಣವನ್ನು ಪುದುವಟ್ಟಾಗಿ (F.D.) ಇಟ್ಟು ಅದರ ಬಡ್ಡಿಯಲ್ಲಿ ನಿತ್ಯ ದಾಸೋಹವನ್ನು ಮತ್ತು ನಿತ್ಯ ಪೂಜೆಯನ್ನು ನಡೆಸಲಾಗುವುದು. ಶರಣ ಮೇಳ ಉತ್ಸವ ನಿರ್ವಹಣೆಗೆ ನಿಧಿಯೊಂದನ್ನು ರಚಿಸುತ್ತಿದ್ದು ಕನಿಷ್ಠ 5000/- ರೂ.ಗಳಿಂದ ಮೇಲೆ ನಿಧಿಗೆ ಕೊಟ್ಟು ಅದರ ಬಡ್ಡಿಯನ್ನು ಶರಣ ಮೇಳ ನಿರ್ವಹಣೆಗೆ ಬಳಸಲು ದಾನಿಗಳು ಸೂಚಿಸಬಹುದು.

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035,
20ನೆಯ ಮೇನ್, 2ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-10
ದೂ : 080-23325335/23322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂ : 08351-268038/268007/268338

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿಶ್ವಗುರು ಬಸವಣ್ಣನವರ 108 ಅಡಿ ಬೃಹತ್ ಮೂರ್ತಿ ಸ್ಥಾಪನೆ ಮತ್ತು ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ. 21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 21 ಎಕರೆ ಜಮೀನನ್ನು ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಶರಣರು ಭವಿಷ್ಯವಾಣಿ ನುಡಿದಿದ್ದಾರೆ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ.

1. ಬಸವ ಮಹಾಮನೆಯ ಕಾರ್ಯಾಲಯ ಕಟ್ಟಡ ನಿರ್ಮಾಣ.
2. ನಿತ್ಯ ಪೂಜಾ ನಿಧಿ - 600 ರೂ : ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ ; ದಾನಿಗಳ ಹೆಸರಿನಲ್ಲಿ ಪೂಜೆಯನ್ನು ಮಾಡಿ, ಪ್ರಸಾದವನ್ನು ಮನೆಗೆ ಅಂಚೆಯಲ್ಲಿ ಕಳಿಸಲಾಗುವುದು.
3. ದಾಸೋಹ ನಿಧಿ - 1200 ರೂ : ದಾಸೋಹಿಗಳು ಕೊಡುವ ಹಣವನ್ನು ನಿಧಿಗಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು ಮತ್ತು ಪ್ರಸಾದವನ್ನು ದಾನಿಗಳಿಗೆ ಅಂಚೆಯಲ್ಲಿ ಕಳಿಸುವುದು.
4. ಬಸವಾಲಯ ನಿರ್ಮಾಣ : ಬಸವಾಲಯ ನಿರ್ಮಿಸಿ ಶ್ರೀ ಗುರು ಬಸವಣ್ಣನವರ ಅಭಯ ಹಸ್ತದ ಮೂರ್ತಿಯನ್ನು ಸ್ಥಾಪಿಸುವುದು.
5. ಬಸವ ಮಂಟಪ ನಿರ್ಮಾಣ : ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ ಕಟ್ಟುವುದು. ಭವ್ಯವಾದ ಪ್ರಾರ್ಥನಾ ಮಂದಿರ "ಬಸವ ಮಂಟಪ" ನಿರ್ಮಾಣಕ್ಕೆ 10,000 ರೂ. ಮತ್ತು ದೇಣಿಗೆ ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು.
6. ಬಸವೇಶ್ವರ ಸಮುದಾಯ ಭವನ : ಯಾತ್ರಿಕರಿಗೆ ಉಚಿತವಾಗಿ ತಂಗಲು ವಿಶಾಲವಾದ ಹಾಲ್ ಮತ್ತು ಕೋಣೆಗಳು.
7. ಶರಣ ಧಾಮ : ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡು

ವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 61,000 (ಅರವತ್ತೊಂದು ಸಾವಿರ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 81,000 (ಎಂಬತ್ತೊಂದು ಸಾವಿರ) ರೂ. ದಂತೆ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 1,50,000 (ಒಂದು ಲಕ್ಷ ಐವತ್ತು ಸಾವಿರ) ರೂ.ಗಳು.

8. 108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ : ಅಂದಾಜು ವೆಚ್ಚ 1.5 ಕೋಟಿ ರೂಪಾಯಿಗಳು.

9. ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ.

ಸಾಲದ ರೂಪದಲ್ಲಿ ಸಹಾಯ : ಪುತ್ಥಳಿಯ ಪೀಠದ ನಿರ್ಮಾಣದಿಂದ ಆರಂಭಿಸಿ ಬೃಹತ್ ಪುತ್ಥಳಿಯ ನಿರ್ಮಾಣ ಪೂರೈಸಲು ಶಿಲ್ಪಿಗಳು ಒಂದು ವರ್ಷದ ಅವಧಿ ನಿಗದಿ ಪಡಿಸಿದ್ದಾರೆ. ಕೆಲಸ ಆರಂಭವಾದರೆ ಮಧ್ಯೆ ತಡೆಯಿಲ್ಲದೆ ಮುಂದುವರೆಯಬೇಕು. ಇಲ್ಲದಿದ್ದರೆ ವೆಚ್ಚದ ಪ್ರಮಾಣ ಮಿತಿ ದಾಟುತ್ತದೆ ಎಂಬ ಅಭಿಪ್ರಾಯ ಶಿಲ್ಪಿಗಳದು. ಈ ಹಿನ್ನೆಲೆಯಲ್ಲಿ ದಾನಿಗಳಿಂದ ದೇಣಿಗೆ, ಸಾಲ ನೀಡಿ ಸಹಾಯಹಸ್ತ ಚಾಚಲು ಮುಂದೆ ಬರುವವರಿಂದ 12% ಬಡ್ಡಿಯದರದ ಮೇಲೆ ಸಾಲವನ್ನು ಪಡೆಯಲು ನಿರ್ಧರಿಸಲಾಗಿದೆ. ಬ್ಯಾಂಕ್‌ನ ಬಡ್ಡಿದರ ತೀರಾ ಕಡಿಮೆಯಿರುವುದರಿಂದ ಇರುವ ಹಣದ ಮೇಲೆ ಬಡ್ಡಿ ಪಡೆದು ಉಪಜೀವನ ಮಾಡುವವರಿಗೆ ಬಹಳ ತೊಂದರೆಯಾಗುತ್ತದೆ. ಅಂಥವರು ನಮ್ಮ ಟ್ರಸ್ಟ್‌ಗೆ ಸಾಲಕೊಟ್ಟರೆ ಅವರಿಗೆ 12% ಬಡ್ಡಿ ಕೊಡಲಾಗುವುದು ಮತ್ತು ಅವರು ಯಾವುದಾದರೂ ನಿಗದಿತ ಉದ್ದೇಶಕ್ಕೆ ಹಣ ಇಟ್ಟುಕೊಂಡಿದ್ದು ಉದಾ: ಮನೆ ಕಟ್ಟಿಸಲು, ಮದುವೆ ಮಾಡಲು, ಸೈಟುಕೊಳ್ಳಲು ಇತ್ಯಾದಿ ಆ ಕೆಲಸಕ್ಕೆ ಅಗತ್ಯಬಿದ್ದಾಗ ಎರಡು ತಿಂಗಳ ಮೊದಲಿಗೆ ಸೂಚನೆ ಕೊಟ್ಟರೆ ಅವರ ಹಣವನ್ನು ಹಿಂತಿರುಗಿಸಲಾಗುವುದು.

1. ರಸೀತಿ ಪುಸ್ತಕ ಪಡೆದು ದೇಣಿಗೆ ಸಂಗ್ರಹಿಸಿಕೊಡಲು ಆಸಕ್ತರಾದವರು ಪುಸ್ತಕಗಳನ್ನು ಪತ್ರ ಬರೆದು ತರಿಸಿಕೊಳ್ಳಬಹುದು. ನೀವೂ ಹೆಚ್ಚಿನ ಪ್ರಮಾಣದಲ್ಲಿ ಕಾಣಿಕೆ ಕೊಡಲು, ನಿಮ್ಮ ಬಂಧು- ಮಿತ್ರರಿಂದ ಕೊಡಿಸಲು ಆಸಕ್ತಿವಹಿಸಬೇಕಾಗಿ ವಿನಂತಿಸುತ್ತೇವೆ.

2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ 80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ ಪಡೆದಿದ್ದು ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು. ಈ ಸೌಲಭ್ಯವು ನವೀಕರಣಗೊಂಡು ಚಾಲ್ತಿಯಲ್ಲಿದೆ ಎಂಬುದನ್ನು ದಾನಿಗಳ ಗಮನಕ್ಕೆ ತರಬಯಸುತ್ತೇವೆ.

3. ವಿಶ್ವಕಲ್ಯಾಣ ಮಿಶನ್ ಸಂಸ್ಥೆಯು ಬೃಹತ್ ಪುತ್ಥಳಿಯ ನಿರ್ಮಾಣದಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ಜೊತೆಗೆ ಕೈ ಜೋಡಿಸುತ್ತಲಿದೆ. ಬಸವ ಗಂಗೋತ್ರಿ ನಗರ ಯೋಜನೆಯ ಆದಾಯದ ಒಂದು ಭಾಗವನ್ನು ಪುತ್ಥಳಿಗೆ ದಾನ ರೂಪದಲ್ಲಿ ಕೊಡಲು ಬಯಸಿದೆ. ಆದ್ದರಿಂದ ನಿವೇಶನಕೊಳ್ಳುವ ಮೂಲಕವೂ ಪರೋಕ್ಷ-ನೆರವು ನೀಡಬಹುದು.

– ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ

ಚಿಂತನೆ - 1 ದುರ್ಜನರು ಯಾರು ?

ಒಮ್ಮೆ ಸುರೇಶ ಎಂಬ ಹುಡುಗ ಜೋರಾಗಿ ಅಳುತ್ತಾ ತಾಯಿಯ ಬಳಿಗೆ ಬಂದು ಪಕ್ಕದ ಮನೆಯ ಮಹೇಶ ತನ್ನನ್ನು ಬೈದನೆಂದು, ಅಣಕಿಸಿದನೆಂದು ಬಂದು ದೂರು ಹೇಳಿದ. ಮಗನ ಪರವಾಗಿ ಜಗಳಕ್ಕೆ ನಿಂತ ತಾಯಿ ಪಕ್ಕದ ಮನೆಯವರ ಬಳಿಗೆ ಹೋದಳು. ಆ ಹುಡುಗನಿಗೆ ಪೆಟ್ಟಾಗಿ ರಕ್ತ ಬರುತ್ತಿತ್ತು. ಅವರ ತಾಯಿ ಗಾಯಕ್ಕೆ ಬಟ್ಟೆ ಕಟ್ಟಿ ಮಗನನ್ನು ಸಮಾಧಾನ ಪಡಿಸುತ್ತಿದ್ದಳು. ''ನಮ್ಮ ಹುಡುಗನನ್ನು ಬೈದುದೇಕೋ'' ಎಂದು ಸುರೇಶನ ತಾಯಿ ಕೇಳಿದಳು. ''ನಿಮ್ಮ ಮಗ ಏನು ಮಾಡಿದ್ದಾನೆಂದು ಅವನನ್ನೇ ಕೇಳಿರಿ'' ಎಂದಳು ಮಹೇಶನ ತಾಯಿ. ''ನೀನು ಅವನಿಗೆ ಏನು ಮಾಡಿದೆಯೊ ?'' ಎಂದು ಸುರೇಶನನ್ನು ಅವನ ತಾಯಿ ಕೇಳಿದಳು. ಆಗ ಅವನು ಖುಷಿಯಿಂದ ಹೇಳಿದ, ''ರಕ್ತ ಬರುವಂತೆ ಹೊಡೆದೆ''. ನೀವೇ ಹೇಳಿ, ರಕ್ತ ಬರುವಂತೆ ಹೊಡೆದುದು ತಪ್ಪೋ ; ಹೊಡೆಸಿಕೊಂಡು ಕೇವಲ ಬೈದುದು ತಪ್ಪೋ ?

ಧಾರವಾಡದ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಅವರ ಶ್ರೀಮತಿಯವರ ವಿಚಾರಧಾರೆಯೂ ಹೀಗೆ ಇದೆ. ಒಮ್ಮೆ ಅವರು ನಮ್ಮ ರಾಷ್ಟ್ರೀಯ ಬಸವ ದಳದ ಶರಣೆಯೊಬ್ಬರನ್ನು ಭೇಟಿಯಾದರಂತೆ. ''ಮಾತಾಜಿಯವರು ಗೂಂಡಾಜನರನ್ನು ಬಿಟ್ಟು ನಮ್ಮನ್ನು ತಡೆಸಿದರು'' ಎಂದರಂತೆ. ಇವರಿಗೆ ಅಚ್ಚರಿಯಾಗಿ ಯಾವಾಗರೀ ಎಂದರಂತೆ. ''ಹುಬ್ಬಳ್ಳಿ ನವನಗರದಲ್ಲಿ ಗಂಗಾ ಮಾತಾಜಿ ಪ್ರವಚನ ನಡೆದಾಗ ನಾವು ವಿರೋಧಿಸಲು ಹೋಗಿದ್ದೆವು. ಆಗ ಮಾತಾಜಿಯವರ ಅನುಯಾಯಿಗಳು ಮುಂದಕ್ಕೇ ಬಿಡಲಿಲ್ಲ; ಕಣ್ಣಿಗೆ ಕಾರದ ಪುಡಿ ಎರಚಿದರು'' ಎಂದರಂತೆ. ಇವರಿಗೆ ಅಂತೂ ಆ ಮಹಿಳೆಯೂ ಬಂದಿದ್ದರು ಎಂಬುದು ಖಚಿತವಾಯಿತು. ''ಮತ್ತೆ ನೀವೇಕೆ ವಿರೋಧಿಸಲು ಹೋಗಿದ್ದಿರಿ. ಪ್ರವಚನ ಮಾಡುವವರು ಮಾಡ್ತಾರೆ, ಕೇಳುವವರು ಕೇಳ್ತಾರೆ....'' ಎಂದು ಮಾರುತ್ತರಿಸಿದರಂತೆ. ''ಮಾತಾಜಿ ಲಿಂಗದೇವ ಮಾಡಿದ್ದಾರೆ. ಅದಕ್ಕೇ ವಿರೋಧಿಸಲು ಹೋಗಿದ್ದೆವು''. ''ನೀವು ಪ್ರತ್ಯೇಕ ವೇದಿಕೆ ಮಾಡಿಕೊಂಡು ತಪ್ಪಿದ್ದರೆ ವಿಶ್ಲೇಷಿಸಬೇಕೇ ವಿನಾ ಗೂಂಡಾಗಿರಿ ಮಾಡಲು ಏಕೆ ಹೋಗಿದ್ದೀರಿ ?'' ಎಂದು ನಮ್ಮವರು ಕೇಳಿದಾಗ ಆ ಮಹಿಳೆ ನಿರುತ್ತರರಾದರಂತೆ. ಹುಬ್ಬಳ್ಳಿ ನವನಗರದಲ್ಲಿ ಗಂಗಾ ಮಾತಾಜಿ ಪ್ರವಚನ ನಡೆದಾಗ ಕೆಲವು ಜನರನ್ನು ಕಾಯಂ ಆಗಿ ಧಾರವಾಡದಲ್ಲಿ ಶಾಸಕ ಚಂದ್ರಕಾಂತ ಬೆಲ್ಲದ, ಅವರ ಸಹೋದರ ಶಿವಣ್ಣ ಬೆಲ್ಲದ್, ನಡಕಟ್ಟಿ ಮುಂತಾದವರ ಪೋಷಣೆಯಲ್ಲಿರಿಸಿ ದಿನಾಲೂ ಪ್ರವಚನಕ್ಕೆ ತೊಂದರೆ ಕೊಡಲು ಚಿತ್ರದುರ್ಗ ಶ್ರೀಗಳು ಕಳಿಸುತ್ತಿದ್ದರು. ಧಾರವಾಡ-ಹುಬ್ಬಳ್ಳಿ ರಾಷ್ಟ್ರೀಯ ಬಸವ ದಳದವರು ದೂರವಾದರೂ ಚಿಂತಿಲ್ಲ ದಿನಾಲೂ ಹೋಗಿ ಕೂಡ್ರುತ್ತಿದ್ದರು. ಒಂದು ದಿವಸ, ದೌರ್ಜನ್ಯಕ್ಕೆ ಸಿದ್ಧರಾಗಿ ಬಂದರು. ಆಗ ಪೋಲೀಸ್ ಇಲಾಖೆಯವರು, ''ನಿಮ್ಮ ಪಾಡಿಗೆ ನೀವು ಪ್ರವಚನ ಹೇಳಿರಿ'' ಎಂದು ಗಂಗಾ ಮಾತಾಜಿಗೆ, ನೀವು ಸುಮ್ಮನೆ ಪ್ರವಚನ ಕೇಳಿರಿ ಎಂದು ಶರಣರಿಗೆ ತಿಳಿಸಿ, ಸುಮಾರು ದೂರಕ್ಕೇ ಹೋಗಿ ನಿಂತು, ಬೆಲ್ಲದ, ನಡಕಟ್ಟಿ ಪರಿವಾರಕ್ಕೆ ಎಚ್ಚರಿಕೆ ಕೊಟ್ಟರು. ''ನಿಮಗೆ ಬೇರೆ ಕೆಲಸವಿಲ್ಲವೆ ? ಅವರ ಪಾಡಿಗೆ ಅವರು ಪ್ರವಚನ ಮಾಡುತ್ತಿದ್ದಾರೆ. ಭಿನ್ನಾಭಿಪ್ರಾಯವಿದ್ದರೆ ನೀವೇ ಬೇರೆ ವೇದಿಕೆ ರಚಿಸಿಕೊಂಡು ವಿಶ್ಲೇಷಣೆ ಮಾಡಿರಿ. ಇನ್ನೊಬ್ಬರ ಕಾರ್ಯಕ್ರಮವನ್ನು ಏಕೆ ಕೆಡಿಸಲು ಬರುತ್ತೀರಿ ?'' ಎಂದು, ಯಾವುದೇ ಘರ್ಷಣೆಯಾಗದಂತೆ ದೂರದಿಂದಲೇ ಕಳಿಸಿದರಂತೆ.

ಶ್ರೀ ಚಂದ್ರಕಾಂತ ಬೆಲ್ಲದ ಪತ್ನಿಯ ಹೇಳಿಕೆ ಸುರೇಶನು ಹೇಳಿದ ದೂರನ್ನು ನೆನಪಿಗೆ ತರುವುದಲ್ಲವೆ ?

★★★

ವಿಸ್ತಾರಗೊಂಡ

ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ. ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ

"ಬಸವ ಗಂಗೋತ್ರಿ"ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ "ಆರೋವಿಲ್ಲೆ" ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಶರಣ ಬಂಧುಗಳು, ಬಸವ ತತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ವನಿಷ್ಠ ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿ ದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. "ಬಸವ ಗಂಗೋತ್ರಿ ನಗರ" 2ನೆಯ ಹಂತದ ಯೋಜನೆಯು ಸಹ ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು

ವರ್ಗ 'ಬಿ'-40' X 40'-ವಿಸ್ತೀರ್ಣ 1600 ಚ.ಅಡಿಗಳು

ವರ್ಗ 'ಸಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ

ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 2000-00 (ಎರಡು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 125-00(ಒಂದುನೂರಾ ಇಪ್ಪತ್ತೈದು) ರೂಗಳನ್ನು ಎಂ.ಓ/ ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. 2ನೆಯ ಹಂತದ ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂ : 080 - 23325335 / 23322790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು,
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೆಯ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ಬಸವ ಗಂಗೋತ್ರಿ ವಿಶೇಷ ವಿವರಗಳು

★ ಬೆಂಗಳೂರು-ಮೈಸೂರು ನಗರಗಳ ಚತುಷ್ಪಥ ಹೆದ್ದಾರಿಗೆ ಹೊಂದಿಕೊಂಡಿದೆ.

★ ರಾಜರಾಜೇಶ್ವರಿ ಡೆಂಟಲ್ ಕಾಲೇಜು, ಡಾನ್‌ಬಾಸ್ಕೋ ಎಂಜಿನಿಯರಿಂಗ್ ಕಾಲೇಜ್ ಮುಂತಾದ ಸಂಸ್ಥೆಗಳ ಸಮೀಪದಲ್ಲಿದೆ.


★ ಬೆಂಗಳೂರು ನಗರದಿಂದ ಸಾರಿಗೆ ವ್ಯವಸ್ಥೆಯ ಅನುಕೂಲವಿದೆ. ಹೀಗಾಗಿ ನಗರದಲ್ಲಿ ಉದ್ಯೋಗಿಗಳಾಗಿರುವವರಿಗೆ ಹೋಗಿ ಬರಲು ಅನುಕೂಲತೆ ಇದೆ.

★ ಮೊದಲನೆಯ ಹಂತದಲ್ಲಿ ರೂಪಿಸಿದ ನಿವೇಶನಗಳು ಮಾರಾಟವಾಗಿದ್ದು ಜನರ ಬೇಡಿಕೆ ಬಹಳವಾಗಿರುವುದರಿಂದ ಎರಡನೆಯ ಹಂತದ ಯೋಜನೆ ಪ್ರಾರಂಭಿಸಲಾಗಿದೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ 21 ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು 231, 227, 228, 229, 226ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ಪ್ರವೇಶ ದ್ವಾರವಿದೆ.




ಪುತ್ಥಳಿ ನಾಂದಿ ಪೂಜೆಯ ಮುನ್ನ ಪೂಜ್ಯ ಗಂಗಾಮಾತಾಜಿಯವರಿಂದ ಪೂಜೆ ಮತ್ತು ಸಹಸ್ರ ಬಸವ ಮಂತ್ರ ಪಠಣ




ಗುರು ಬಸವಣ್ಣನವರ ಪೂಜೆಯನ್ನು ನೆರವೇರಿಸುತ್ತಿರುವ ಪೂಜ್ಯ ಚನ್ನ ಬಸವಾನಂದ ಸ್ವಾಮೀಜಿ ಮತ್ತು ಪೂಜ್ಯ ಅಲ್ಲಮ ಪ್ರಭು ಸ್ವಾಮೀಜಿ.




ಬಸವಣ್ಣನವರ 108 ಅಡಿ ಮೂರ್ತಿಯ ಉದ್ಘಾಟನೆ ದೀಪೋಜ್ವಲನದ ಮೂಲಕ - ಪೂಜ್ಯ ಗಂಗಾ ಮಾತಾಜಿಯವರಿಂದ.




ಪೂಜ್ಯ ಮಾತಾಜಿಯವರಿಂದ 108 ಅಡಿಯ ಮಾದರಿ ಮೂರ್ತಿಗೆ ಪೂಜೆ.




ಪೂಜ್ಯ ಮಾತಾಜಿಯವರಿಂದ 108 ಅಡಿಯ ಮೂರ್ತಿಯ ಮಾದರಿಯ ಮೇಲೆ ಪುಷ್ಪ ವೃಷ್ಟಿ.




ಪುತ್ಥಳಿ ನಾಂದಿ ಪೂಜೆಯಂದು ಸಮಾರಂಭದಲ್ಲಿ ಭಾಗವಹಿಸಿದ್ದ ಪೂಜ್ಯರು



ನಾಂದಿ ಪೂಜೆ ಸಮಾರಂಭ ಉದ್ಘಾಟಿಸುತ್ತಿರುವ ಪೂಜ್ಯ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ.



ಸಮಾರಂಭದಲ್ಲಿ ಉಪಸ್ಥಿತರಿದ್ದ ಬಸವ ಧರ್ಮ ಪೀಠದ ಪೂಜ್ಯರುಗಳು.



ಸಮಾರಂಭದಲ್ಲಿ ಭಾಗಿಗಳಾಗಿದ್ದ ಶರಣ ಸಮೂಹ




ಸಮಾರಂಭದಲ್ಲಿ ಭಾಗಿಗಳಾಗಿದ್ದ ಶರಣ ಸಮೂಹ



ಭಾಲ್ಕಿ ಶರಣ ಮಹಾದೇವ್ ರವರ ನೂತನ 'ಭಾಗ್ಯಶ್ರೀ' ಫೋಟೋಗ್ರಫಿ ಮತ್ತು ವಿಡಿಯೋ ಗ್ರಫಿ ತರಬೇತಿ ಕೇಂದ್ರದ ಉದ್ಘಾಟನೆಗೆ ಆಗಮಿಸುತ್ತಿರುವ ಪೂಜ್ಯರುಗಳು.



ಶರಣ ಮಹಾದೇವ್ ಬೇಲೂರೆ ಅವರಿಂದ ಪೂಜ್ಯರಿಗೆ ಮಾಲಾರ್ಪಣೆಯ ಮೂಲಕ ಸ್ವಾಗತ.



ಕೊಪ್ಪಳ ಬಸವ ಮಂಟಪದಲ್ಲಿ ವಾರದ ಸಾಮೂಹಿಕ ಪ್ರಾರ್ಥನೆ ಮಾಡಿಸುತ್ತಿರುವ ಪೂಜ್ಯ ಮಾತಾಜಿ.



ದಿ. 19-9-2004ರಂದು ಕುಂಬಳಗೋಡಿನ ಸರ್ಕಾರಿ ಶಾಲೆಯಲ್ಲಿ ಶಿಕ್ಷಕ ದಿನಾಚರಣೆಯ ನಿಮಿತ್ತ ಬೆಂಗಳೂರು ರಾಷ್ಟ್ರೀಯ ಬಸವ ದಳದವರಿಂದ ಬಡ ಮಕ್ಕಳಿಗೆ ಹೋಮಿಯೋಪತಿ ಔಷಧಿ ವಿತರಣೆ ಮತ್ತು ಆರೋಗ್ಯ ತಪಾಸಣೆ ನಡೆಯಿತು.



ದಿ. 5-9-2004 ರಂದು ಬೈಲಹೊಂಗಲ ರಾಷ್ಟ್ರೀಯ ಬಸವ ದಳದಲ್ಲಿ ಬಸವಣ್ಣನವರ ಅಮೃತ ಶಿಲಾ ಮೂರ್ತಿ ಸ್ಥಾಪನೆ ನಂತರ ಪ್ರವಚನ ಮಾಡುತ್ತಿರುವ ಪೂಜ್ಯ ಮಾತಾಜಿ.




ಸಂಕೇಶ್ವರಲ್ಲಿ ನಡೆದ ಮನೆ-ಮನೆಗೆ ಬಸವ ಜ್ಯೋತಿ ಕಾರ್ಯಕ್ರಮ. ಚಿತ್ರದಲ್ಲಿ ಸಂಕೇಶ್ವರ ರಾಷ್ಟ್ರೀಯ ಬಸವ ದಳದ ಶರಣರನ್ನು ಕಾಣಬಹುದು.



ದಿ. 1-9-2004ರಂದು 108 ಅಡಿ ಮೂರ್ತಿಯ ನಿರ್ಮಾಣದ ನಾಂದಿ ಪೂಜೆಯು ಉದ್ಘಾಟನೆ ಪೂಜ್ಯ ಮಾತಾಜಿಯವರಿಂದ

CPMG/KA/BGW-50/2003-2005 WPP (W) - 17 R. No. 19980/70



ಬೈಲಹೊಂಗಲದಲ್ಲಿ ದಿ. 5-9-2004ರಂದು ಪ್ರತಿಷ್ಠಾಪನೆಗೊಂಡ ಅಮೃತ ಶಿಲಾ ಬಸವ ಮೂರ್ತಿ